ADVERTORIAL



ನಾ ಕಂಡಂತೆ ಯಡಿಯೂರಪ್ಪ



ನನ್ನ ದೃಷ್ಟಿಯಲ್ಲಿ ಅನೇಕ ಮುಖ್ಯಮಂತ್ರಿಗಳನ್ನು ನಾನು ಶಾಸಕನಾಗಿ ನೋಡಿರುವವರಲ್ಲಿ ಸಾರ್ವಜನಿಕ ಬದುಕನ್ನು ಅರ್ಥ ಮಾಡಿಕೊಂಡು ಹಾಗೂ ಅವರಿಗೆ ಅನುಕೂಲವಾಗುತ್ತದೆ ಎಂಬುದನ್ನು ತಿಳಿದು ಅಲ್ಲಿಗೆ ಬೇಕಾಗುವ ಅನೇಕ ವ್ಯವಸ್ಥೆಯನ್ನು ತಿಳಿದು ತತಕ್ಷಣ ಜೇಬಿನಿಂದ ಪೆನ್ನು ತೆಗೆದು ಅದನ್ನು ಚಿಕ್ಕ ಡೈರಿಯಲ್ಲಿ ನಮೂದಿಸಿಕೊಂಡು ಕಾರಿನಲ್ಲಿ ಕುಳಿತ ತಕ್ಷಣ ಸಂಬಂಧಿಸಿದ ಆರ್ಥಿಕ ಇಲಾಖೆಯ ಮುಖ್ಯಸ್ಥರಿಗೆ ತಿಳಿಸಿ ಆದೇಶವಾಗುವವರೆಗೂ ನಿಗಾವಹಿಸಿ ಕಾರ್ಯಗತಗೊಳಿಸುವಂತಹ ದಿಟ್ಟ ಮುಖ್ಯ ಮಂತ್ರಿಯನ್ನು ನಾನು ನೋಡಿಲ್ಲ.

2008ರಲ್ಲಿ ಬಿ.ಎಸ್.ವೈ. ಮುಖ್ಯಮಂತ್ರಿಗಳಾಗಿದ್ದ ಸಂಧರ್ಭದಲ್ಲಿ ಹೊಳಲ್ಕೆರೆಯ ಒಂಟಿಕಲ್ಲು ಕಂಬ ಮಠದಲ್ಲಿ ಮುರುಘರಾಜೇಂದ್ರ ಸ್ವಾಮೀಜಿಗಳ ಪುಣ್ಯ ಸ್ಮರಣೆ ಕಾರ್ಯಕ್ರಮಕ್ಕೆ ಭಾಗವಹಿಸಲು ಹೆಲಿಕ್ಯಾಪ್ಟರ್‌ನಲ್ಲಿ ಬಂದಿದ್ದರು, ಅವರನ್ನು ಕಾರ್ಯಕ್ರಮ ನಡೆಯುವ ಜಾಗಕ್ಕೆ ಕರೆದುಕೊಂಡು ಹೋಗುತ್ತಿದ್ದ ಮುಖ್ಯರಸ್ತೆ ಚಿಕ್ಕದಾಗಿದ್ದು ಪೂರ್ತಿ ಗುಂಡಿಗಳಿಂದ ತುಂಬಿತ್ತು ಕಾರಿನಲ್ಲಿ ಹೋಗಬೇಕಾದರೆ ಈ ಮುಖ್ಯ ರಸ್ತೆಯ ಪರಿಸ್ಥಿತಿ ವಿವರಿಸಿದೆ. ಪುಣ್ಯ ಸ್ಮರಣೆ ಕಾರ್ಯಕ್ರಮದ ನಂತರ ಹೆಲಿಪ್ಯಾಡ್ ಹತ್ತಿರ Guard of Honour ತೆಗೆದುಕೊಂಡ ತಕ್ಷಣ ಸಂಭಂದಿಸಿದ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳಿಗೆ ಅಲ್ಲಿಂದಲೇ ಪೋನ್ ಮಾಡಿ ಚಂದ್ರಪ್ಪನವರು ಹೊಳಲ್ಕೆರೆಗೆ ಸಂಬಂದಿಸಿದ ಕೆಲಸಗಳು ಏನೇನು ಹೇಳುತ್ತಾರೆ ಅವರಿಂದ ಪಟ್ಟಿ ತೆಗೆದುಕೊಂಡು ನನ್ನಿಂದ ಮಂಜೂರಾತಿ ಪಡೆಯಿರಿ ಎಂದು ನಿಂತ ಜಾಗದಿಂದಲೇ ಪೋನ್ ಮಾಡಿ ಹೇಳಿದರು.

ನನ್ನ ವಿಧಾನ ಸಭಾ ಕ್ಷೇತ್ರಕ್ಕೆ ಯಾವ ಕೆಲಸ ಆಗಬೇಕು ಎಂದು ಹೇಳಿದರೆ ತಕ್ಷಣ ಸ್ಪಂದಿಸಿ ಕೆಲಸ ಮಾಡಿಕೊಡುವ ಧಾರಾಳ ಗುಣ ಯಡಿಯೂರಪ್ಪರವರದಾಗಿತ್ತು.

ನನ್ನ ಕ್ಷೇತ್ರದ ಭಾಗದ ರೈತರ ಬದುಕಿನ ಆಧಾರ ಸ್ಥಂಭ ಅಡಿಕೆ ತೋಟಗಳು. ಆ ಸಂಧರ್ಭದಲ್ಲಿ ನೀರಾವರಿ ಕೊರತೆ ತೀವ್ರವಾಗಿ ಕಾಡುತ್ತಿದ್ದು, ಅದರ ಪರಿಣಾಮ ನೂರಾರು ಅಡಿಕೆ ತೋಟಗಳು ಒಣಗುತ್ತಿದ್ದವು. ಅಡಿಕೆ ಬೆಳೆಯ ಮೇಲೆ ಅವಲಂಭಿತವಾಗಿದ್ದ ರೈತ ಕುಟುಂಬಗಳು ಬೀದಿಗೆ ಬರುವ ಸ್ಥಿತಿಯಲ್ಲಿದ್ದವು, ಸಂಕಷ್ಟದಲ್ಲಿದ್ದ ರೈತರ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದಾಗ ಅಪ್ಪರ್ ಭದ್ರ ಯೋಜನೆಯ ಮುಖಾಂತರ ಕೆರೆಗಳನ್ನು ತುಂಬಿಸುವ ಯೋಜನೆಗೆ ಚಾಲನೆಯನ್ನು ನೀಡಿ ನೀರಾವರಿ, ವಿದ್ಯುತ್, ಆರೋಗ್ಯ, ಶಿಕ್ಷಣ, ಸಾರಿಗೆ, ವಸತಿ, ಹೀಗೆ ಅನೇಕ ಕೆಲಸ ಕಾರ್ಯಗಳ ಅಭಿವೃದ್ದಿಯ ಮಹಾಪೂರವನ್ನೇ ಹರಿಸಿದ ದೂರ ದೃಷ್ಟಿಯ ಧೀಮಂತ ನಾಯಕ ಬಿ.ಎಸ್.ಯಡಿಯೂರಪ್ಪರವರಾಗಿದ್ದರು.

2013ರಲ್ಲಿ ಬಿ.ಜೆ.ಪಿ. ಪಕ್ಷದಲ್ಲಿ ರಾಜಕೀಯ ಬಿಕ್ಕಟ್ಟು ಉದ್ಬವಿಸಿದ ಸಂಧರ್ಭದಲ್ಲಿ ಅವರು ಪಕ್ಷ ತೊರೆದಾಗ ನಾನು ತಕ್ಷಣವೇ 06 ತಿಂಗಳು ಅವಧಿಗೂ ಮುನ್ನವೇ ಶಾಸಕ ಸ್ಥಾನಕ್ಕೆ ರಾಜೀನಾಮೆಯನ್ನು ನೀಡಿ ಅಧಿಕಾರ ತ್ಯಾಗವನ್ನು ಮಾಡಿ ಯಡಿಯೂರಪ್ಪರವರ ಜೊತೆಗೆ ಕೈ ಜೋಡಿಸಿ ರಾಜಕೀಯ ಶಕ್ತಿ ತುಂಬಲು ಬೆಂಬಲವಾಗಿ ನಾನು ನಿಂತುಕೊಂಡೆ.

ನನ್ನ ವಿಧಾನ ಸಭಾ ಕ್ಷೇತ್ರಕ್ಕೆ ಅನೇಕ ಭಾರಿ ಬಂದಾಗ ಇಲ್ಲಿ ಆಗಿರುವ ಕೆಲಸಗಳನ್ನು ನೋಡಿ ಸಂತೋಷ ಪಡುವುದರ ಜೊತೆಗೆ ನಿಮ್ಮ ಜಿಲ್ಲಾ ಕೇಂದ್ರದಲ್ಲಿ ಇಲ್ಲದಂತಹ ಕೆಲಸಗಳನ್ನು ಮಾಡಿರುವೆ ಎಂದು ಹರ್ಷ ವ್ಯಕ್ತಪಡಿಸುತ್ತಿದ್ದರು.

ಭಾರತೀಯ ಜನತಾ ಪಕ್ಷದ ಶಾಸಕರಲ್ಲದೇ, ಯಾವುದೇ ಪಕ್ಷದ ಶಾಸಕರು ಅಥವಾ ಜನ ಪ್ರತಿನಿಧಿಗಳು ಅವರ ಬಳಿ ಹೋದರೂ, ಯಾವುದೇ ಪಕ್ಷ ಬೇದವಿಲ್ಲದೇ, ಜಾತಿ ಬೇದವಿಲ್ಲದೇ ಅವರಿಗೆ ಗೌರವ ಕೊಟ್ಟು ಮುಗುಳ್ನಗೆ ನಗುತ್ತಾ ಸಂತೋಷ ವ್ಯಕ್ತ ಪಡಿಸುತ್ತಾ ಅವರಿಗೆ ಸ್ಪಂದಿಸಿ ಕೆಲಸ ಮಾಡಿಕೊಡುತ್ತಿದ್ದರು. ಶಾಸನ ಸಭೆಯಲ್ಲಿ ಶಾಸಕರುಗಳ ಜೊತೆ ಒಡನಾಟ ಇರುವ ಸಂಧರ್ಭದಲ್ಲಿ ಅವರು ಮಾತನಾಡುತ್ತಿದ್ದನ್ನು ಕೇಳಿ ನನಗೆ ಬಹಳ ಸಂತೋಷವಾಗುತ್ತಿತ್ತು. ಇಂತಹ ಧೀಮಂತ ನಾಯಕನ ಸಾರ್ಥಕ 50 ವರ್ಷಗಳ ಅಭಿಮಾನೋತ್ಸವ ಕಾರ್ಯಕ್ರಮವನ್ನು ನಮ್ಮ ಚಿತ್ರದುರ್ಗದಲ್ಲಿ ಹಮ್ಮಿಕೊಂಡಿರುವುದು ನಮ್ಮೆಲ್ಲರಿಗೂ ಸಂತೋಷದಾಯಕವಾಗಿದೆ.





ಶ್ರೀ ಡಾ. ಎಂ. ಚಂದ್ರಪ್ಪ
ಶಾಸಕರು, ಹೊಳಲ್ಕೆರೆ
ವಿಧಾನಸಭಾ ಕ್ಷೇತ್ರ.

ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 36°c | ಕನಿಷ್ಠ 24°c

ಉತ್ಸವಕ್ಕೆ ಟೊಮೆಟೊ ಬಾತ್, ಮೊಸರನ್ನ, ಮೈಸೂರು ಪಾಕ್

ಚಿತ್ರದುರ್ಗ: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ, ಪುರಪ್ರವೇಶ ಕಾರ್ಯಕ್ರಮಕ್ಕೆ ಆಗಮಿಸುವ ಅಭಿಮಾನಿಗಳ ಹಸಿವು ನೀಗಿಸಲು ಟೊಮೆಟೊ ಬಾತ್, ಮೊಸರನ್ನ, ಮೈಸೂರು ಪಾಕ್ ಸಿದ್ಧವಾಗುತ್ತಿದೆ. ಹತ್ತು ಲಕ್ಷದಷ್ಟು ಅಪಾರ ಪ್ರಮಾಣದಲ್ಲಿ ಅಭಿಮಾನಿಗಳು ಆಗಮಿಸುತ್ತಿರುವ ಹಿನ್ನೆಲೆ ಅವರಿಗೆ ಊಟದ ವ್ಯವಸ್ಥೆ ಮಾಡುವುದು ಸವಾಲಿನ ಕೆಲಸವಾಗಿದ್ದುಸರಾಗಗೊಳಿಸುವ ನಿಟ್ಟಿನಲ್ಲಿ ಸರಳ ಊಟದ ವ್ಯವಸ್ಥೆಗೆ ಮೊರೆ ಹೋಗಲಾಗಿದೆ. ಟೊಮೆಟೊ ಬಾತ್, ಮೊಸರನ್ನ ಸೂಕ್ತವೆಂದು ತೀರ್ಮಾನಿಸಲಾಗಿದೆ. ಈ ಸಂಬಂಧ ಶುಕ್ರವಾರ ಸುದ್ದಿಗಾರರಿಗೆ ಮಾಹಿತಿ ನೀಡಿದ ಸಂಸದ ಗೋವಿಂದ ಕಾರಜೋಳ, ಮೈಸೂರು, ಬೆಂಗಳೂರು, ಚಿತ್ರದುರ್ಗ, ತುಮಕೂರು ಮೊದಲಾದ 5 ಕಡೆಯ ಪ್ರಮುಖ ಅಡುಗೆಯವರಿಗೆ ನಿರ್ವಹಣೆ ಕೊಟ್ಟಿದ್ದೇವೆ. ಊಟ ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗಲಿದೆ ಎಂದರು. ಒಂದೊಂದು ಅಡುಗೆ ಮನೆ ಬಳಿ ಬೆಂಗಳೂರಿನ ಶಾಸಕರ 100ರಂತೆ ಸ್ವಯಂ ಸೇವಕರೂ ಇರುತ್ತಾರೆ. ಹಂತ ಹಂತವಾಗಿ ಬಿಸಿಯೂಟವನ್ನೇ ಕೊಡಲು ಕ್ರಮ ಕೈಗೊಳ್ಳಲಿದ್ದಾರೆ ಎಂದರು.



ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಆಗಮಿಸುವ ಜನತೆಗೆ ಊಟೋಪಚಾರಕ್ಕೆ ಪ್ರತ್ಯೇಕ ಕೌಂಟರ್‌ಗಳನ್ನು ತೆಗೆದು ನದಿಗಳ ಹೆಸರು ನಾಮಕರಣ ಮಾಡಿರುವುದು. ನದಿಗಳ ಹೆಸರಿನ ಕೌಂಟರ್‌ಗಳನ್ನು ವೀಕ್ಷಿಸಲು ಅಪಾರ ಸಂಖ್ಯೆಯಲ್ಲಿ ಜನರು ನೆರೆದಿದ್ದರು.



ಚಿತ್ರದುರ್ಗದಲ್ಲಿ ಶನಿವಾರ ನಡೆಯಲಿರುವ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಸಾವಿರಾರು ಮಂದಿ ಪೊಲೀಸರು ಕಾರ್ಯಕ್ರಮ ನಡೆಯುವ ಪ್ರದೇಶದಲ್ಲಿ ಪೂರ್ವಸಿದ್ಧತೆ ಕ್ರಮ ಕೈಗೊಂಡರು. ಈ ವೇಳೆ ಬಿಜೆಪಿ ಕಾರ್ಯಕರ್ತರು, ಪೊಲೀಸ್ ಸಿಬ್ಬಂದಿ ಹಾಜರಿದ್ದರು.

ಬಿಎಸ್‌ವೈ ಉತ್ಸವಕ್ಕೆ ರಂಗೇರಿದ ಕೋಟೆ ನಾಡು

ಅಭಿಮಾನೋತ್ಸವಕ್ಕೆ ಓಬವ್ವ ಬೀಡು ಸಜ್ಜು | 10 ಲಕ್ಷ ಜನ ಭಾಗಿ | ಕೇಂದ್ರ ಸಚಿವ ಶಾ ಉಪಸ್ಥಿತಿ | ರಸ್ತೆ ಇಕ್ಕೆಲಗಳಲ್ಲಿ ಯಡಿಯೂರಪ್ಪ ಭಾವಚಿತ್ರ ಮೆರುಗು | ಬೃಹತ್ ಪೆಂಡಾಲ್, ದೊಡ್ಡ ಫ್ಯಾನ್ ಅಳವಡಿಕೆ | ವೇದಿಕೆಗೆ ಲೈಟಿಂಗ್ಸ್ ವ್ಯವಸ್ಥೆ



ಚಿತ್ರದುರ್ಗ ನಗರದ ಪ್ರಮುಖ ವೃತ್ತದಲ್ಲಿ ರಾರಾಜಿಸುತ್ತಿರುವ ಫ್ಲೆಕ್ಸ್, ಬಂಟಿಂಗ್ಸ್‌ಗಳು.



ಕಾರ್ಯಕ್ರಮ ನಡೆಯುವ ಪ್ರದೇಶದ ದ್ವಾರ ಬಾಗಿಲಲ್ಲಿ ವಿಶಿಷ್ಟ ರೀತಿಯ ಗೋಪುರಗಳು

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಕರ್ನಾಟಕ ರಾಜ್ಯದ ಜನಪ್ರಿಯ ರಾಜಕಾರಣಿ ರೈತಪರ ಹೋರಾಟಗಾರ ದಕ್ಷಿಣ ಭಾರತದಲ್ಲಿ ಭಾರತೀಯ ಜನತಾ ಪಕ್ಷವನ್ನು ಕರ್ನಾಟಕದಲ್ಲಿ ಕಟ್ಟಿ ಬೆಳೆಸಿ ಅಧಿಕಾರಕ್ಕೆ ಬರುವಂತೆ ಮಾಡುವಲ್ಲಿ ಶ್ರಮಿಸಿದ ಮುಂಚೂಣಿ ನಾಯಕ ಬಿ.ಎಸ್. ಯಡಿಯೂರಪ್ಪ ರಾಜಕಾರಣಕ್ಕೆ ಬಂದು ಭರ್ತಿ ಅರ್ಧ ಶತಮಾನ ತುಂಬಿದ ಸಂತಸದ ಘಳಿಗೆಯನ್ನು ಸಾಕಾರಗೊಳಿಸಲು ಕೋಟೆನಾಡು ಚಿತ್ರದುರ್ಗದಲ್ಲಿ ಮೇ 9ರಂದು ಆಯೋಜಿಸಿರುವ ಅಭಿಮಾನೋತ್ಸವ ಕಾರ್ಯಕ್ರಮದ ಸಿದ್ಧತೆಗಳು ಪೂರ್ಣಗೊಂಡಿವೆ.

ಮಧ್ಯಕರ್ನಾಟಕದ ಅನೇಕ ಜಿಲ್ಲೆಗಳು ಸಂಧಿಸುವ ಕೋಟೆನಾಡು ಚಿತ್ರದುರ್ಗ ಅಭಿಮಾನೋತ್ಸವದ ಪ್ರಯುಕ್ತ ಸಿಂಗಾರಗೊಂಡು ಮಧುವಣಗಿತ್ತಿಯಂತೆ ಕಂಗೊಳಿಸುತ್ತಿದೆ. ಕಾರ್ಯಕರ್ತರು ಅಭಿಮಾನಿಗಳಲ್ಲಿ ಉತ್ಸಾಹ ಇಮ್ಮಡಿಯಾಗಿದೆ. ಇಡೀ ಚಿತ್ರದುರ್ಗ ಕೇಸರಿ ಬಣ್ಣದಲ್ಲಿ ಮಿಂದೆದ್ದಿದೆ.

ಚಳ್ಳಕೆರೆ ಗೇಟ್‌ನಿಂದ ನಗರಕ್ಕೆ ಪ್ರವೇಶಿಸುವ ಮಾರ್ಗದೆಲ್ಲೆಡೆ ಬಿ.ಎಸ್.ಯಡಿಯೂರಪ್ಪ ಅವರ ಭಾವಚಿತ್ರ ಇರುವ ಪೋಸ್ಟರ್, ಬ್ಯಾನರ್‌ಗಳು ಗಮನಸೆಳೆಯುತ್ತಿವೆ. ಅಭಿಮಾನದ ನಾಯಕನ ಫ್ಲೆಕ್ಸ್‌ಗಳುರಸ್ತೆಯಎರಡೂಇಕ್ಕೆಲಗಳಲ್ಲೂರಾರಾಜಿಸುತ್ತಿವೆ. ಡಿವೈಡರ್‌ಗಳ ಮಧ್ಯೆಯೂ ಬಿಎಸ್ವೈ ಭಾವಚಿತ್ರಗಳು ಗಮನ ಸೆಳೆಯುತ್ತಿವೆ. ಮದಕರಿ, ಅಂಬೇಡ್ಕರ್, ಗಾಂಧೀ ವೃತ್ತ, ಕನಕವೃತ್ತ ಕಂಗೊಳಿಸುತ್ತಿವೆ.

ಅಧಿಕೃತವಾಗಿ ಇದು ಪಕ್ಷದ ಕಾರ್ಯಕ್ರಮ ಆಗದಿದ್ದರೂ ಇಡೀ ಭಾರತೀಯ ಜನತಾ ಪಕ್ಷದ ಎಲ್ಲಾಮುಖಂಡರು, ಕಾರ್ಯಕರ್ತರು ಒಂದೊಂದು ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯಕ್ರಮ ಯಶಸ್ವಿಗೆ ಶ್ರಮಿಸುತ್ತಿರುವುದು ಎದ್ದು ಕಾಣಿಸುತ್ತಿದೆ. ಬೃಹತ್ ಪೆಂಡಾಲ್ ನಿರ್ಮಾಣ ಮಾಡಿ ಬರುವ ಜನರಿಗೆ ಬಿಸಿ ಗಾಳಿಯಿಂದ ಮುಕ್ತಿ ಕಾಣಿಸಲು ಬೃಹತ್ ಫ್ಯಾನ್‌ಗಳನ್ನು ಅಳವಡಿಸಲಾಗುತ್ತಿದೆ.

ಅಭಿಮಾನೋತ್ಸವಕ್ಕೆ ರಾಜ್ಯದ ನಾನಾ ಮೂಲೆಗಳಿಂದ ಆಗಮಿಸುತ್ತಿರುವ ಅಭಿಮಾನಿಗಳು, ಕಾರ್ಯಕರ್ತರು ಸೇರಿದಂತೆ ಹಾಲಿ, ಮಾಜಿ ಶಾಸಕ, ಸಚಿವರು ಆಗಮಿಸುವ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯ ಪೂರ್ವ ಸಿದ್ಧತೆಗಳೂ ಕೂಡ ದಿನವಿಡೀ ವೇದಿಕೆ ನಿರ್ಮಾಣ ಮಾಡುತ್ತಿರುವ ಕಡೆ, ಊಟದ ಕೌಂಟರ್‌ಗಳು, ಪಾರ್ಕಿಂಗ್ ಸ್ಥಳದ ತಪಾಸಣೆ ಸೇರಿದಂತೆ ಅಗತ್ಯ ಬಂದೋಬಸ್ತ್ ಗೆ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಇತರೆ ಪೊಲೀಸ್ ಅಧಿಕಾರಿಗಳು ಕಾರ್ಯಕ್ರಮ ನಡೆಯುವ ದಾವಣಗೆರೆ ರಸ್ತೆಯ ಶ್ರೀ ಶಿವಶರಣ ಮಾದಾರ ಚನ್ನಯ್ಯ ಗುರು ಪೀಠದ ಸಮೀಪದ ಮೈದಾನದಲ್ಲಿ ಬೀಡುಬಿಟ್ಟಿದೆ.

ಕಳೆದ ಒಂದು ವಾರದಿಂದ ಇಲ್ಲಿ ತಯಾರಿ ನಡೆಯುತ್ತಿರುವಾಗಲೇ ದಾವಣಗೆರೆ ಪೂರ್ವ ವಲಯದ ಪೊಲೀಸ್ ಮಹಾ ನಿರೀಕ್ಷಕ ರವಿಕಾಂತೇಗೌಡ ಅವರ ಮುಂದಾಳತ್ವದಲ್ಲಿ ಜಿಲ್ಲೆಯ ಪೊಲೀಸರಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಗಿದೆ.ಕೇಂದ್ರದ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರ ಬಿಗಭದ್ರತೆ ಮತ್ತಷ್ಟು ಗಟ್ಟಿಯಾಗುತ್ತಿದೆ. ಶುಕ್ರವಾರ ಎಸ್ಪಿಜಿ ತಂಡ ಕಾರ್ಯಕ್ರಮ ಆಯೋಜಿಸಿರುವ ಸ್ಥಳಕ್ಕೆ ಬಂದು ವೇದಿಕೆ ಸೇರಿದಂತೆ ಇಡೀ ಕಾರ್ಯಕ್ರಮದ ಒಟ್ಟಾರೆ ಚಿತ್ರಣದ ಮಾಹಿತಿ ಕಲೆಹಾಕಿತು.

ಸಿಂಗಾರಗೊಂಡ ದುರ್ಗ: ಎಲ್ಲಿ ನೋಡಿದರೂ ಅಭಿಮಾನೋತ್ಸವದ ಬ್ಯಾನರ್‌ಗಳು ವಿಜೃಂಭಿಸುತ್ತಿವೆ. ಆಳೆತ್ತರದ ಫ್ಲೆಕ್ಸ್‌ಗಳು ನೋಡುಗರ ಮೈ ಮನ ತಣಿಸುವಂತೆ ಮಾಡುತ್ತಿವೆ. ಲೈಟಿಂಗ್ ವ್ಯವಸ್ಥೆ ಸೇರಿದಂತೆ ವೇದಿಕೆ ತಯಾರಿಗೆ ಸಾವಿರಾರು ಕಾರ್ಮಿಕರು ಹಗಲು ರಾತ್ರಿ ಎನ್ನದೇ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರುಊಟದಉಸ್ತುವಾರಿನೋಡಿಕೊಳ್ಳುತ್ತಿದ್ದಾರೆ. ಯಡಿಯೂರಪ್ಪ ಅವರ ಪುತ್ರ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷಬಿ.ವೈ.ವಿಜಯೇಂದ್ರಖುದ್ದುಕಾರ್ಯಕ್ರಮದ ರೂಪುರೇಷೆ ಗಳ ಸಿದ್ಧತೆಯ ಉಸ್ತುವಾರಿ ನೋಡುತ್ತಿದ್ದಾರೆ. ಇದರ ಜತೆಗೆ ಇವರ ಸಹೋದರ ಸಂಸದ ಬಿ.ವೈ.ರಾಘವೇಂದ್ರ ಕೂಡ ಅಪ್ಪನ ಅಭಿಮಾನೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸಲು ಟೊಂಕಕಟ್ಟಿ ನಿಂತಿದ್ದಾರೆ.

ಪ್ರಮುಖ ಆಕರ್ಷಣೆ ಆದ ಅಂಬಾಸಿಡರ್ ಕಾರು

ಚಿತ್ರದುರ್ಗ: ಜಿಲ್ಲೆಯಲ್ಲಿ ಶನಿವಾರ ನಡೆಯಲಿರುವ ಬಿಎಸ್ ವೈ ಅಭಿಮಾನೋತ್ಸವಕ್ಕೆ ಎಲ್ಲರನ್ನೂ, ಎಲ್ಲವನ್ನೂ ಒಳಗೊಳ್ಳುವ ಸೂತ್ರಪಾಲನೆಗೆಸಂಘಟಕರುಮುಂದಾಗಿದ್ದಾರೆ. ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ಜಾರಿಗೊಳಿಸಿದ ಯೋಜನೆಗಳಿಗೆ ಸ್ತಬ್ಧಚಿತ್ರಗಳ ಸ್ವರೂಪ ನೀಡಿದ್ದರೆ ರಾಜಕೀಯ ಆರಂಭದ ದಿನಗಳಲ್ಲಿ ಅವರು ಬಳಸಿದ್ದ ಅಂಬಾಸಿಡರ್ ಕಾರನ್ನು ಕಾರ್ಯಕ್ರಮ ನಡೆಯವ ಪ್ರದೇಶಕ್ಕೆ ತಂದು ಜನರನ್ನು ಆಕರ್ಷಿಸಲಾಗುತ್ತಿದೆ.

ಬಿ.ಎಸ್.ಯಡಿಯೂರಪ್ಪ ತಮ್ಮ ರಾಜಕೀಯ ಜೀವನದಲ್ಲಿ ಬಳಸಿದ ಸಿಕೆಆರ್45 ನಂಬರಿನ ಹಿಂದೂಸ್ತಾನ್ ಅಂಬಾಸಿಡರ್ ಕಾರಿನ ಬಗ್ಗೆ ಮಾಹಿತಿ ನೀಡಿದ ಶಾಸಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ ವೈ.ವಿಜಯೇಂದ್ರ, ಈ ಕಾರನ್ನು ರಾಜ್ಯದ ಜನ ಈಗಲೂ ನೆನಪಿನಲ್ಲಿ ಇಟ್ಟುಕೊಡಿದ್ದಾರೆ ಎಂದರು.

ಕರ್ನಾಟಕದಲ್ಲಿ ಯಡಿಯೂರಪ್ಪ ಅವರನ್ನು ರೈತನಾಯಕ ಎಂದು ಜನ ಗುರುತಿಸುತ್ತಾರೆ, ಪ್ರೀತಿಸುತ್ತಾರೆ. ಯಡಿಯೂರಪ್ಪ ಅವರ ಮೇಲೆ ನಾಡಿನ ಜನ ಯಾವ ರೀತಿಯ ಪ್ರೀತಿ ಮತ್ತು ಅಭಿಮಾನ ತೋರುತ್ತಾರೋ ಅದೇ ಸಿಕೆಆರ್45 ನಂಬರಿನ ಕಾರಿಗೂ ಜನ ಪ್ರೀತಿ ತೋರುತ್ತಾರೆ. ಆ ಕಾಲದಲ್ಲಿ ಕೇವಲ ನಗರಕ್ಕೆ ಸೀಮಿತವಾಗಿದ್ದ ಬಿಜೆಪಿಯನ್ನು ಹಳ್ಳಿಹಳ್ಳಿಗೆ ತೆಗೆದುಕೊಂಡು ಹೋಗಿ ಪಕ್ಷದ ಸಂಘಟನೆ ಬಲಪಡಿಸಲು ಬಿಎಸ್‌ವೈ ಸಾಕಷ್ಟು ಶ್ರಮಿಸಿದರು. ಪಕ್ಷ ಸಂಘಟನೆಯಲ್ಲಿ ಯಡಿಯೂರಪ್ಪ ಅವರ ಪಾತ್ರ ಎಷ್ಟಿದೆಯೊ ಈ ಕಾರಿನ ಪಾತ್ರವೂ ಅಷ್ಟೇ ಇತ್ತು ಎಂದರು.

ಬಿಎಸ್‌ವೈ ಅವರೊಂದಿಗೆ ಅನಂತ ಕುಮಾರ್, ಡಿ.ಎಚ್.ಶಂಕರಮೂರ್ತಿ ಅವರು ಇದೇ ಕಾರಿನಲ್ಲಿ ರಾಜ್ಯದಲ್ಲಿ ಪ್ರವಾಸ ಮಾಡಿದ್ದಾರೆ. ಆ ದಿನಗಳಲ್ಲಿ ರಸ್ತೆಗಿಂತ ಗುಂಡಿಗಳೇ ಹೆಚ್ಚಿದ್ದವು. ಯಡಿಯೂರಪ್ಪ ಇದೇ ಕಾರನ್ನು ಸದಾ ಬಳಸುತ್ತಿದ್ದರು. ಅವರ ಪ್ರವಾಸಕ್ಕೆ ಶಕ್ತಿ ತುಂಬಿದ್ದು ಈ ಕಾರು ಎಂದರು.

ಶಂಕರ್ ಎಂಬುವರು ಹತ್ತಾರು ವರ್ಷ ಚಾಲಕರಾಗಿದ್ದರು. ಮಂಜಣ್ಣ ಎಂಬ ಮತ್ತೊಬ್ಬರು ಚಾಲಕರಾಗಿದ್ದರು. ಅವರು ನಮ್ಮ ಕುಟುಂಬ ಸದಸ್ಯರಂತೆ ಹದಿನೈದು ವರ್ಷ ಕಾರು ಓಡಿಸಿದ್ದಾರೆ. ಒಮ್ಮೆ ಮಾತ್ರ ಕಾರು ಅಡಿಮೇಲಾಗಿದ್ದು ಮತ್ತೆ ಯಾವುದೇ ಅವಘಡ ಸಂಭವಿಸಿಲ್ಲ. ಸುರಕ್ಷಿತವಾಗಿ ಇಡೀ ರಾಜ್ಯದಲ್ಲಿ ಬಿಎಸ್ ವೈ ಅವರನ್ನು ಈ ಕಾರು ಸುತ್ತಾಡಿಸಿದೆ ಎಂದರು.

ಅಭಿಮಾನೋತ್ಸವದಲ್ಲಿ ಈ ಕಾರು ಪ್ರಮುಖ ಆಕರ್ಷಣೆಯಾಗಿದ್ದು ಎಲ್ಲರೂ ಬಂದು ಕಾರಿನ ಬಳಿ ಪೋಟೋ ಕ್ಲಿಕ್ಕಿಸಿಕೊಳ್ಳುತ್ತಿದ್ದಾರೆ.



ಯಡಿಯೂರಪ್ಪ ಅವರು ರಾಜಕೀಯ ಆರಂಭದ ದಿನಗಳಲ್ಲಿ ಬಳಸಿದ್ದ ಅಂಬಾಸಿಡರ್‌ಕಾರು.

112 ಅಡಿ ಉದ್ದ, 40 ಅಡಿ ಅಗಲದ ವೇದಿಕೆ

ಹೆಚ್ಚು ಜನರಿಗೆ ವೇದಿಕೆಯಲ್ಲಿ ಇಲ್ಲ ಅವಕಾಶ | 50 ಕುರ್ಚಿಗಳಿಗೆ ಸೀಮಿತ | 60 ಎಕರೇಲಿ ಅಭಿಮಾನೋತ್ಸವ

•**ರಮೇಶ್ ಬಿದರಕೆರೆ**
ಕನ್ನಡಪ್ರಭ ವಾರ್ತೆ ಚಿತ್ರದುರ್ಗ

ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಹಿಂಭಾಗದಲ್ಲಿ ಸುಮಾರು 60 ಎಕರೆಗೂ ಹೆಚ್ಚು ಜಾಗದಲ್ಲಿ ಮಾಜಿ ಮುಖ್ಯಮಂತ್ರಿ ಬಿ. ಎಸ್.ಯಡಿಯೂರಪ್ಪನವರ 50 ವರ್ಷದ ರಾಜಕೀಯ ಬದುಕಿನ ನೆನಪಿ ಗಾಗಿ ಅಭಿಮಾನೋತ್ಸವಕಾರ್ಯಕ್ರಮಹಮ್ಮಿಕೊಳ್ಳಲಾಗಿದೆ. ಬಿರು ಬಿಸಿಲಿನ ನಡುವೆಯೂ ಭರದ ಸಿದ್ಧತೆಗಳು ಪೂರ್ಣ ಗೊಂಡಿದ್ದು ಕ್ಷಣಗಣನೆ ಆರಂಭವಾಗಿದೆ.

ನಾಡಿನ ವಿವಿಧ ಮಠಗಳ ಸ್ವಾಮೀಜಿ ಗಳಿಗೆ, ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರಿಗೆ ಹಾಗೂ ಸಾರ್ವಜನಿಕರಿಗೆ ಪ್ರತ್ಯೇಕ ಸಭಾಂಗಣ ವ್ಯವಸ್ಥೆ ಮಾಡಲಾ ಗಿದೆ. ಅಭಿಮಾನೋತ್ಸವ ಕಾರ್ಯಕ್ರಮಕ್ಕೆ 112 ಅಡಿ ಉದ್ದ ಹಾಗೂ 40 ಅಡಿ ಅಗಲ, ಹತ್ತು ಅಡಿ ಎತ್ತರದ ಬೃಹತ್ ವೇದಿಕೆ ನಿರ್ಮಿಸಲಾಗಿದೆ. 150ಕ್ಕೂ ಹೆಚ್ಚು ಕಾರ್ಮಿಕರ ಶ್ರಮದಿಂದ ಸುಂದರ ಹಾಗೂ ವಿಶಾಲವಾದ ವೇದಿಕೆ ತಯಾರಾಗಿದೆ. ಸುಮಾರು ಮೂವತ್ತಕ್ಕೂ ಹೆಚ್ಚು ಎಲ್ಇಡಿ ವಾಲ್‌ಗಳನ್ನು ಅಳವಡಿಸಿದ್ದು ಲಕ್ಷಕ್ಕೂ ಹೆಚ್ಚು ಆಸನದ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಕಾರ್ಯಕ್ರಮ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ.

ಬೃಹತ್ ವೇದಿಕೆಯಲ್ಲಿ ಅತಿಥಿಗಳಿಗೆ ಮೊದಲ ಸಾಲಿನಲ್ಲಿ 25 ಮತ್ತು ಅವುಗಳ ಹಿಂಭಾಗ 25 ಆಸನಗಳನ್ನು ಹಾಕಲಾಗಿದೆ. ಸುಮಾರು ಹತ್ತು ಲಕ್ಷ ಜನ ಸೇರುವ ನಿರೀಕ್ಷೆ ಇದ್ದು ಬೆಂಗಳೂರು, ಚಿತ್ರದುರ್ಗ, ಮೈಸೂರು ಕಡೆಯ 5 ಕೌಟಟರ್‌ಗಳಲ್ಲಿ ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರಿಗೆ ಅಡುಗೆ ತಯಾರಿ ಮಾಡಲಾಗುತ್ತಿದೆ. ಒಂದೊಂದು ಕೌಂಟರ್‌ನಲ್ಲಿ ಅಡುಗೆ ಭಟ್ಟರು ಜತೆಗೆ ಸಹಾಯಕರು ಸೇರಿ ಸುಮಾರು 250ಕ್ಕೂ ಅಧಿಕ ಮಂದಿ ಅಡುಗೆ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಐದು ಕೌಟಟರ್‌ಸೇರಿ ಸಾವಿರಾರು ಜನರು ಅಡುಗೆ ತಯಾರಿಕೆಗೆ ಕೆಲಸ ಮಾಡುತ್ತಿದ್ದಾರೆ.ಯಲಹಂಕ ಶಾಸಕ ವಿಶ್ವನಾಥ್, ಊಟದ ಉಸ್ತುವಾರಿ ವಹಿಸಿದ್ದು ಬರುವ ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲು ಸಿದ್ಧತೆ ನಡೆಸಿದ್ದಾರೆ. ಚಿತ್ರದುರ್ಗದ ಸುತ್ತಮುತ್ತಲಿನ ಹಳ್ಳಿಗಳ ನೂರಾರು ಯುವಕರನ್ನು ಕೆಲಸಕ್ಕೆ ಪಡೆದು ಅಡುಗೆ, ಶಾಮಿಯಾನ, ಕುರ್ಚಿಗಳನ್ನು ಹಾಕಲಾಗುತ್ತಿದೆ. ಕಾರ್ಯಕ್ರಮಕ್ಕೆ ಬರುವ ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ಮೊಸರನ್ನ, ಪಲಾವ್ ಹಾಗೂ ಮೈಸೂರು ಪಾಕ್ ಊಟ ಕೊಡುವ ತಯಾರಿ ನಡೆದಿದ್ದು ರಾಶಿ ರಾಶಿ ತರಕಾರಿ ಗುಡ್ಡೆಗಳೇ ಕಂಡು ಬಂದವು.

ಕಾರ್ಯಕ್ರಮದ ಬಂದೋಬಸ್ತ್‌ಗಾಗಿ ಸುಮಾರು 2500 ಸಾವಿರಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿದ್ದು ವ್ಯವಸ್ಥಿತ ಕಾರ್ಯಕ್ರಮ ಜರುಗಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ವೇದಿಕೆಯ ಬಳಿಯ ಮುಖ್ಯ ರಸ್ತೆಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ವರ ಸ್ವಾಗತಕ್ಕೆ ಅದ್ದೂರಿ ತಯಾರಿ ನಡೆಸಲಾ ಗಿದೆ. ಕಾರ್ಯಕ್ರಮದ ಸ್ಥಳ ತಲುಪುವ ಮುಖ್ಯ ರಸ್ತೆಗಳಲ್ಲಿ ಸಾಲು ಸಾಲು ಫ್ಲೆಕ್ಸ್, ಕಟೌಟ್ ಗಳನ್ನು ನಿಲ್ಲಿಸಲಾಗಿದೆ.

ಬಿರು ಬೇಸಗೆ ಧಗೆ ಹಿನ್ನೆಲೆ ಸುಮಾರು 30 ಕ್ಕೂ ಹೆಚ್ಚು ಹೆಲಿಕಾಪ್ಟರ್‌ಫ್ಯಾನ್‌ಗಳನ್ನು ಅಳವಡಿಸಲಾಗಿದ್ದು ಒಂದೊಂದು ಫ್ಯಾನ್ ಸಹ ಸುಮಾರು 1500 ಇಂದ 2000 ಜನರಿಗೆ ಗಾಳಿ ಒದಗಿಸಲಿವೆ ಎನ್ನಲಾಗಿದೆ.



ಬಿಎಸ್‌ವೈ ಅಭಿಮಾನೋತ್ಸವಕ್ಕೆ ಸಜ್ಜಾಗಿರುವ ಬೃಹತ್ ವೇದಿಕೆ.

ಪೂರ್ಣಕುಂಭ ಹೊತ್ತು ಸಾಗಿದ ಸೌಭಾಗ್ಯ

ಬಿ.ಎಸ್.ಯಡಿಯೂರಪ್ಪಗೆ ನಾರಿಯರಿಂದ ಭರ್ಜರಿ ಸ್ವಾಗತ



ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸೌಭಾಗ್ಯ ಬಸವರಾಜನ್ ಪೂರ್ಣಕುಂಭ ಹೊತ್ತು ಯಡಿಯೂರಪ್ಪ ಅವರ ಪುರಪ್ರವೇಶದ ಮೆರವಣಿಗೆಯಲ್ಲಿ ಪಾಲ್ಗೊಂಡರು.

ಚಿತ್ರದುರ್ಗ: ಬಿಎಸ್‌ವೈ ಅಭಿಮಾನೋತ್ಸವದ ಅಂಗವಾಗಿ ಶುಕ್ರವಾರ ಸಂಜೆ ಚಿತ್ರದುರ್ಗ ಪುರಪ್ರವೇಶ ಮಾಡಿದ ಯಡಿಯೂರಪ್ಪ ಅವರಿಗ ಮಹಿಳೆಯರು ಪೂರ್ಣಕುಂಭ ಸ್ವಾಗತದ ಜೊತೆಗೆ ಹಲಗೆ ಸದ್ದಿಗೆ ಕುಣಿದು ಕುಪ್ಪಳಿಸಿ ನೆರೆದಿದ್ದವರ ಗಮನ ಸೆಳೆದರು.

ಯಡಿಯೂರಪ್ಪ ಅವರು ಸಂಜೆ ನಾಲ್ಕು ಗಂಟೆ ವೇಳೆಗೆ ಚಿತ್ರದುರ್ಗಕ್ಕೆ ಆಗಮಿಸಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಬೇಕಿತ್ತು. ಆದರೆ ಸೂರ್ಯಾಸ್ತದ ವೇಳೆಗೆ ಆರು ಗಂಟೆ ಸುಮಾರಿಗೆ ಚಿತ್ರದುರ್ಗ ಪ್ರವೇಶಿಸಿದಾಗ ವಾತಾವರಣ ತಣ್ಣಗಿತ್ತು.

ಬಸವೇಶ್ವರ ಪ್ರತಿಮೆ ಪಕ್ಕದಿಂದ ಹೊರಟ ಮೆರವಣಿಗೆ ಆರಂಭದಲ್ಲಿ ಮಹಿಳೆಯರು ಪೂರ್ಣ ಕುಂಭ ಸ್ವಾಗತ ಕೋರಿದರು. ನಂತರ ಒನಕೆ ಹಿಡಿದು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ವಿಜಯಗರ ಜಿಲ್ಲೆಯಿಂದ ಆಗಮಿಸಿದ್ದ ಐದು ನೂರಕ್ಕೂ ಹೆಚ್ಚು ಮಹಿಳೆಯರು ಅತ್ಯಂತ ಸಂಭ್ರಮದಿಂದಲೇ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ದಾರಿಯುದಕ್ಕೂ ಸಾಗಿದ ಅವರ ಮೊಗದಲ್ಲಿ ಖುಷಿ ಮನೆ ಮಾಡಿತ್ತು.

ಪೂರ್ಣಕುಂಭ ಹೊತ್ತ ಮಹಿಳೆಯರೊಟ್ಟಿಗೆ ಚಿತ್ರದುರ್ಗ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಸೌಭಾಗ್ಯ ಬಸವರಾಜನ್ ಸ್ವತಹ ಕುಂಬ ಹೊತ್ತು ಸಾಗಿ ಮೆರವಣಿಗೆ ಮೆರಗು ತಂದರು. ಚಿತ್ರದುರ್ಗ ಎಂದಾಕ್ಷಣ ಒನಕೆ ಓಬವ್ವ ನೆನಪಾಗುತ್ತಾಳೆ. ಇಡೀ ಮೆರವಣಿಗೆ ಓಬವ್ವಳ ನಾಡನ್ನು ಪುನರ್‌ನೆನಪಿಸಿತು. ಕೈಯಲ್ಲಿ ಒನಕೆ ಹಿಡಿದ ಸಾವಿರಾರು ಮಹಿಳೆಯರು ಐತಿಹಾಸಿಕ ನಗರದ ಮಹತ್ವ ಸಾರಿದರು.

ಸಂಜೆ ಆರು ಗಂಟೆಗೆ ಆರಂಭವಾದ ಮೆರವಣಿಗೆ ಏಳುವರೆ ಆದರೂ ಗಾಂಧಿ ವೃತ್ತಕ್ಕೆ ಆಗಮಿಸಿರಲಿಲ್ಲ. ಒಂದು ಕಿ.ಮೀ ದಾರಿ ಕ್ರಮಿಸಲು ಒಂದುವರೆ ತಾಸು ತೆಗೆದುಕೊಂಡಿತ್ತು. ಮಹಿಳೆಯರು ಅತ್ಯಂತ ಶಿಸ್ತುಬದ್ಧರಾಗಿ ಮೆರವಣಿಗೆ ಜತೆ ಹೆಜ್ಜೆ ಹಾಕಿದರು.

ಸುದ್ದಿ ಸಿಂಚನ

ಮಾದಿಗ ಸಮುದಾಯದಿಂದ ಹಲಗೆ ಹಾರ ಸಮರ್ಪಣೆ



ಚಿತ್ರದುರ್ಗ: ಬಿಎಸ್ ವೈ ಅಭಿಮಾನೋತ್ಸವದ ಅಂಗವಾಗಿ ಶುಕ್ರವಾರ ಚಿತ್ರದುರ್ಗದಲ್ಲಿ ಹಮ್ಮಿಕೊಳ್ಳಲಾದ ಯಡಿಯೂರಪ್ಪ ಪುರಪ್ರವೇಶ ಮೆರವಣಿಗೆಯಲ್ಲಿ ಮಾದಿಗ ಸಮುದಾಯದ ಮುಖಂಡರು ಹಲಗೆ ಹಾರ ಹಾಕುವುದರ ಮೂಲಕ ಗಮನ ಸೆಳೆದರು. ಮೆರವಣಿಗೆ ಅಂಬೇಡ್ಕರ್‌ಪ್ರತಿಮೆ ಬಳಿ ಆಗಮಿಸಿದಾಗ ಕ್ರೇನ್ ಸಹಾಯದಿಂದ ಯಡಿಯೂರಪ್ಪ ಅವರಿಗೆ ಅರ್ಪಿಸಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಸುಮಾರು 40 ಅಡಿ ಎತ್ತರದ 24 ತಮಟೆಗಳಿರುವ ಹಾರ ಇದಾಗಿತ್ತು. ಮಾದಿಗ ಸಮುದಾಯದ ಮುಖಂಡರಾದ ಜಿ.ಹೆಚ್. ಮೋಹನ್, ಪರಶುರಾಮ, ರವಿ ಬ್ಯಾಲಾಳು, ಗುತ್ತಿನಾಡು ನಾಗರಾಜು ಈ ಹಾರವ ವಿಶೇಷವಾಗಿ ತಯಾರಿಸಿದ್ದರು.

ಗೋಪನಹಳ್ಳಿ ಆಂಜನೇಯ ದೇವಸ್ಥಾನ ಉದ್ಘಾಟನೆ

ಚಳ್ಳಕೆರೆ: ತಾಲೂಕಿನ ಗೋಪನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಆಂಜನೇಯಸ್ವಾಮಿ ದೇವಸ್ಥಾನದ ಉದ್ಘಾಟನೆ, ನೂತನ ವಿಗ್ರಹಮೂರ್ತಿ, ನಾಗದೇವತಾ ಪ್ರತಿಷ್ಠಾಪನೆ, ಧ್ವಜಸ್ತಂಭಸ್ಥಾಪನೆ ಮತ್ತು ನೂತನ ಶಿಖರ ಕಳಸಾರೋಹಣ ಮಹೋತ್ಸವವನ್ನು ಏ10ಮತ್ತು 11ರಂದು ಹಮ್ಮಿಕೊಳ್ಳಲಾಗಿದೆ. ಭಾನುವಾರ ಸಂಜೆ 5.30 ರ ಗೋಧೂಳಿ ಮುಹೂರ್ತದಲ್ಲಿ ಧ್ವಜಾರೋಹಣ, ಸುವಾಸಿನಿಯರಿಂದ ಗಂಗಾಪೂಜೆ ಮತ್ತು ನೂತನ ಶಿಲಾ ಮೂರ್ತಿಗಳಿಗೆ ಗಂಗಾಸ್ನಾನ, ಪಂಚಗವ್ಯ ಸ್ನಾನ, ನೇತ್ರ ಬಂಧನ ನೆರವೇರಿಸಿ ಮಂಗಳ ವಾದ್ಯಗಳೊಂದಿಗೆ ಆಲಯ ಪ್ರವೇಶ, ದೀಪಾರಾಧನೆ, ದ್ವಾರಪೂಜೆ, ಕ್ಷೇತ್ರ ದೇವತಾ ಪ್ರಾರ್ಥನಾ ನಂತರ ಶೈವಾಗಮೋಕ್ತ ಸ್ವಸ್ತಿ ಪುಣ್ಯಾಹ ವಾಚನ, ನಾಂದಿ ಸಮಾರಾಧನೆ, ಪಂಚಕಲಶ, ನವಗ್ರಹ, ಅಷ್ಟದಿಕ್ಪಾಲಕ, ವಾಸ್ತು, ಮೃತ್ಯುಂಜಯ, ಸಪ್ತ ಸಭಾಧಿದೇವತೆ ಮತ್ತು ಪ್ರಧಾನ ಕಳಶ ಸ್ಥಾಪನೆ ಮತ್ತು ಶಿಲಾ ಮೂರ್ತಿಗಳಿಗೆ ಕ್ಷೀರಧಿವಾಸ, ನಾನಾವಿಧದ ಪುಷ್ಪ, ಪತ್ರೆ, ಫಲಗಳಿಂದ ಅಧಿವಾಸಗಳು, ವಿಗ್ರಹ ಸಂಸ್ಕಾರ, ವಾಸ್ತು ರಾಕೋಘ್ನ ಹೋಮ, ಲಘು ಪೂರ್ಣಾಹುತಿ, ಶಯನಾಧಿವಾಸ ಮತ್ತು ಮಂಗಳಾರತಿ ಇರುತ್ತದೆ.ಸೋಮವಾರದ ಪ್ರಾತಃ ಕಾಲ ಬೆಳಗ್ಗೆ 4.30 ರಿಂದ ಸುಪ್ರಭಾತ ಸೇವೆ, ನಿರ್ಮಾಲ್ಯ ವಿಸರ್ಜನಾ, ಪೀಠ ಸಂಸ್ಕಾರ, ಅಷ್ಟಬಂಧನದಿಂದ ವಿಗ್ರಹ ಪ್ರತಿಷ್ಠಾಪನೆ ನೆರವೇರುವುದು. ನಂತರ ಮಹಾರುದ್ರಾಭಿಷೇಕ, ವಸ್ತ್ರ, ಪುಷ್ಪಗಳಿಂದ ಅಲಂಕಾರ, ನಂತರ ಗಣಹೋಮ, ನವಗ್ರಹ, ಪಂಚಬ್ರಹ್ಮ, ಅಷ್ಟದಿಕ್ಪಾಲಕರು, ಶ್ರೀ ರಾಮತಾರಕ ಹೋಮ, ಪವಮಾನ ಹೋಮ ಹಾಗೂ ಪ್ರಾಣ ಪ್ರತಿಷ್ಠಾಹೋಮ, ಕಲಾಹೋಮ, ಜಯಾಧಿಹೋಮ, ಶಿಖರ ಕಳಶ ಸ್ಥಾಪನೆ, ನಾಡಿಸಂದಾನ, ದೃಷ್ಟಿ ಪೂಜೆ, ನೇತ್ರೋಮಿಲನ, ಪ್ರಧಾನ ಪೂರ್ಣಾಹುತಿ, ದೇನು ದರ್ಶನ, ಕದಳಿ, ಕೂಷ್ಮಾಂಡ ಛೇದನ ಕಾರ್ಯಕ್ರಮ ಇರುತ್ತದೆ. ಮೇ 11ರಂದು ಸೋಮವಾರ ರಾತ್ರಿ 9 ಗಂಟೆಗೆ ಸರಿಯಾಗಿ ಗೋಪನಹಳ್ಳಿ ಗ್ರಾಮದ ಕಲಾವಿದರಿಂದ ಪ್ರೇಮ ತ್ಯಾಗ ಎಂಬ ಸುಂದರ ಸಾಮಾಜಿಕ ನಾಟಕ ಇರುತ್ತದೆ ಎಂದು ದೇವಸ್ಥಾನ ಸಮಿತಿ ತಿಳಿಸಿದೆ.

ಅಭಿಮಾನೋತ್ಸವ ಸಂಭ್ರಮ | ವಿಐಪಿ, ವಿವಿಐಪಿಗಳಿಗೆ ಪ್ರತ್ಯೇಕ ನಿಲುಗಡೆ ವ್ಯವಸ್ಥೆ | ಬೃಹತ್ ಕಟೌಟ್‌ಗಳು. ಎಲ್ಲೆಡೆ ರಾರಾಜಿಸುವ ಕೇಸರಿ ಬಣ್ಣದ ಅಲಂಕೃತ ಫ್ಲೆಕ್ಸ್

ವಾಹನ ನಿಲುಗಡೆಯ ಸ್ಥಳಗಳಿಗೆ ನಾಡಿನ ನದಿಗಳ ಹೆಸರು

• **ಜಡೇಕುಂಟೆ ಮಂಜುನಾಥ್**
ಕನ್ನಡಪ್ರಭವಾರ್ತೆ ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ರಾಜಕಾರಣಕ್ಕೆ ಬಂದು 50 ವರ್ಷ ತುಂಬಿದ ಹಿನ್ನೆಲೆ ಚಿತ್ರದುರ್ಗದ ದಾವಣಗೆರೆ ರಸ್ತೆಯ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದಹಿಂಭಾಗದವಿಶಾಲಪ್ರದೇಶದಲ್ಲಿ ಬೃಹತ್ ಪೆಂಡಾಲ್ ನಿರ್ಮಾಣ ಮಾಡಿ ಆಯೋಜಿಸಿರುವ ಅಭಿಮಾನೋತ್ಸವ ಎಂಬ ವಿನೂತನ ಕಾರ್ಯಕ್ರಮಕ್ಕೆ ಆಗಮಿಸುವ ಅಭಿಮಾನಿಗಳು, ಕಾರ್ಯಕರ್ತರ ವಾಹನಗಳೂ ಸೇರಿದಂತೆ ವಿಐಪಿ, ವಿವಿಐಪಿಗಳ ವಾಹನ ನಿಲುಗಡೆಯ ಸ್ಥಳಗಳಿಗೆ ನಾಡಿನ ಪ್ರಮುಖ ನದಿಗಳ ಹೆಸರುಗಳನ್ನು ಸೂಚಿಸುವ ಮೂಲಕ ಪೊಲೀಸ್ ಇಲಾಖೆ ನಾಡಿನ ಹಿರಿಮೆಯನ್ನು ಸಾರುವ ನಿಟ್ಟಿನಲ್ಲಿ ಶ್ಲಾಘನೀಯ ಕೆಲಸಕ್ಕೆ ಮುಂದಾಗಿದೆ.

ದಾವಣಗೆರೆ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಹಾವೇರಿ ಕಡೆಯಿಂದ ಬರುವ ವಾಹನಗಳಿಗೆ ದಾವಣಗೆರೆ ರಸ್ತೆಯ ಮಡಿವಾಳ ಮಾಚಿದೇವ ಮಠದ ಕಡೆಗೆ ವೇದಾವತಿ ವಾಹನ ನಿಲುಗಡೆ ಪ್ರದೇಶ ಎಂದು ಗುರುತಿಸಲಾಗಿದೆ.

ಬೃಹತ್ ವೇದಿಕೆ ಬಲಭಾಗದ ಹಿಂಭಾಗದಲ್ಲಿ ವಿಐಪಿ, ವಿವಿಐಪಿಗಳಿಗೆ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಈ ಪ್ರದೇಶಕ್ಕೆ ಕಾವೇರಿ ಎಂದು ನಾಮಕರಣ ಮಾಡಲಾಗಿದೆ.

ಬೆಂಗಳೂರು, ತುಮಕೂರು, ಹಾಸನ, ಮಂಡ್ಯ, ಮೈಸೂರು ಕಡೆಗಳಿಂದ ಬರುವ ವಾಹನಗಳಿಗೆ ಎಸ್ ಜೆ ಎಂ ಹೆಲಿಪ್ಯಾಡ್ ಹಿಂಭಾಗದ ಮೂರು ಎಕರೆ ಪ್ರದೇಶದಲ್ಲಿ ಭದ್ರಾ ಹೆಸರಿನ ನಿಲುಗಡೆ ಪ್ರದೇಶವನ್ನು ಮೀಸಲಿಡಲಾಗಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು ಕಡೆಗಳಿಂದ ಬರುವ ವಾಹನಗಳಿಗೆ ಈಚಲ ನಾಗೇನಹಳ್ಳಿ ಹತ್ತಿರ ತುಂಗಾ ಹೆಸರಿನ ನಿಲುಗಡೆ ಪ್ರದೇಶದಲ್ಲಿ ವ್ಯವಸ್ಥೆ ಮಾಡಲಾಗಿದೆ.

ವೇದಿಕೆ ಹತ್ತಿರವೇ ಹೆಲಿಪ್ಯಾಡ್: ಕೇಂದ್ರ ಗೃಹಮಂತ್ರಿ ಅಮಿತ್ ಶಾ ಅವರು ಪಶ್ಚಿಮ ಬಂಗಾಳದ ನೂತನ ಮುಖ್ಯಮಂತ್ರಿ ಪ್ರಮಾಣ ವಚನಸ್ವೀಕಾರಸಮಾರಂಭಮುಗಿಸಿನೇರವಾಗಿ ಶಿವಮೊಗ್ಗದ ವಿಮಾನ ನಿಲ್ದಾಣಕ್ಕೆ ಬಂದಿಳಿದು ಅಲ್ಲಿಂದ ಹೆಲಿಕಾಪ್ಟರ್‌ಮೂಲಕ ಚಿತ್ರದುರ್ಗ ಪ್ರೇವೇಶಿಸಲಿದ್ದಾರೆ. ಇದಕ್ಕಾಗಿಯೇ ಮಾದಾರ ಚೆನ್ನಯ್ಯ ಮಠದಹತ್ತಿರಅಂದರೆಹಿಂಭಾಗದಲ್ಲಿ ವ್ಯವಸ್ಥೆ ಮಾಡಲಾಗಿದ್ದು. ಯಾವುದೇ ಸಾರ್ವಜನಿಕ ಕಿರಿಕಿರಿಗೆ ಅವಕಾಶ ನೀಡದೇ ನೇರವಾಗಿ ವೇದಿಕೆಗೆ ಕರೆತರಲಾಗುವುದು ಎಂದು ಸಂಘಟಕರು ಹೇಳಿದ್ದಾರೆ.

ಚಳ್ಳಕೆರೆ ಗೇಟ್ ಹತ್ತಿರ ಮುರುಘರಾಜೇಂದ್ರ ಕ್ರೀಡಾಂಗಣ ಮತ್ತು ಎಸ್ ಜೆ ಎಂ ಕ್ರೀಡಾಂಗಣ ಎರಡು ಹೆಲಿಪ್ಯಾಡ್ ಗಳು ಇದ್ದರೂ ಹೊಸದಾಗಿ ನಿರ್ಮಿಸಿರುವವೇದಿಕೆಹಿಂಭಾಗದಹೆಲಿಪ್ಯಾಡ್ ನಲ್ಲಿ ಕೇಂದ್ರ ಗೃಹ ಮಂತ್ರಿ ಅಮಿತ್ ಶಾ ಬಂದಿಳಿಯಲಿದ್ದಾರೆ.

ಬೃಹತ್ ಕಟೌಟುಗಳು: ಯಡಿಯೂರಪ್ಪ ಅವರ ಬಣ್ಣ ಬಣ್ಣದ ಕಟೌಟ್ ಗಳು, ಫ್ಲೆಕ್ಸ್‌ಗಳು, ಕೇಸರಿ ಬಣ್ಣದಲ್ಲಿ ವಿವಿಧ ಅಲಂಕಾರಗಳನ್ನು ಮಾಡಲಾಗಿದೆ. ಯಡಿಯೂರಪ್ಪ ಅವರ ಜೊತೆಗೆ ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ, ಬಿ.ವೈ.ವಿಜಯೇಂದ್ರ ಅವರ ಕಟೌಟುಗಳು ಎಲ್ಲರ ಗಮನಸೆಳೆಯುತ್ತಿವೆ. ಮಾದಾರ ಚೆನ್ನಯ್ಯ ಗುರುಪೀಠದ ಸರ್ವಿಸ್ ರಸ್ತೆಯಿಂದ ಸೀದಾ ವೇದಿಕೆಗೆ ಹೋಗಲು ಮುಖ್ಯ ದ್ವಾರವನ್ನು ಹೊಕ್ಕು ಒಳಹೋಗುತ್ತಿದ್ದರೆ ಯಾವುದೋ ಬೇರೆ ಲೋಕಕ್ಕೆ ಹೋಗುತ್ತಿದ್ದೇವಾ ಎಂಬಷ್ಟರ ಮಟ್ಟಿಗೆ ವಿಜೃಂಭಣೆಯಿಂದ ಅಲಕಾಂರ ಮಾಡಲಾಗಿದೆ.



ವಾಹನ ನಿಲುಗಡೆಗೆ ಶುಕ್ರವಾರ ಮಾರ್ಕಿಂಗ್ ಮಾಡಿದ ಕೆಲಸಗಾರರು.

ಭರಮಣ್ಣ ಕೆರೆ ಪ್ರವಾಸಿ ತಾಣ ಮಾಡಿ

ರೈತರು, ಯುವಜನರ ಆಗ್ರಹ | ಅಭಿಮಾನೋತ್ಸವಕ್ಕೆ ಬರುವ ಶಾ ಇತ್ತ ಗಮನ ಹರಿಸಲಿ: ಮನವಿ


• **ಕನ್ನಡಪ್ರಭ ವಾರ್ತೆ** ಸಿರಿಗೆರೆ

300 ವರ್ಷಗಳ ಹಿಂದೆ ಭರಮಣ್ಣನಾಯಕ ಕಟ್ಟಿಸಿದ 1200 ಎಕರೆ ವ್ಯಾಪ್ತಿಯ ಐತಿಹಾಸಿಕ ಕೆರೆಗೆ ಪ್ರವಾಸಿ ತಾಣದ ರೂಪ ಕೊಟ್ಟು ಸಂರಕ್ಷಿಸಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಭರಮಸಾಗರ ಹಾಗೂ ಸುತ್ತಲಿನ ಸಾರ್ವಜನಿಕರು, ರೈತರು, ಯುವಕರು ಮತ್ತು ಪ್ರವಾಸಿ ಪ್ರೇಮಿಗಳು ಮನವಿ ಮಾಡಿದ್ದಾರೆ.

ಮೇ 9 ರಂದು ಜಿಲ್ಲಾ ಕೇಂದ್ರದಲ್ಲಿ ನಡೆಯ ಲಿರುವ ಬಿ.ಎಸ್.ಯಡಿಯೂರಪ್ಪ ಅಭಿಮಾ ನೋತ್ಸವದಲ್ಲಿ ಭಾಗಿಯಾಗಲು ಆಗಮಿಸು ತ್ತಿರುವ ಅಮಿತ್ ಶಾ ಈ ವಿಷಯದಲ್ಲಿ ತಮ್ಮ ನಿರ್ಧಾರ ಪ್ರಕಟಿಸಬೇಕೆಂದು ಕೋರಿದ್ದಾರೆ. ಯಡಿಯೂರಪ್ಪ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಭರಮಸಾಗರ ಏತ ನೀರಾವರಿ ಯೋಜನೆಯನ್ನು ಸಿರಿಗೆರೆಯ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮಾರ್ಗದರ್ಶನದಲ್ಲಿ ಜಾರಿಯಾಗುವಂತೆ ಶ್ರಮವಹಿ ಸಿದ್ದಾರೆ. ಭರಮಸಾಗರದ ವಿಶಾಲವಾದ ಕೆರೆ ತುಂಭದ್ರೆಯ ನೀರಿನಿಂದದ ಮೈದುಂಬಿ ನಿತ್ಯವೂ ಸಾವಿರಾರು ಪ್ರವಾಸಿಗರನ್ನು ಆಕರ್ಷಿ ಸುತ್ತಿದೆ. ಈ ಕೆರೆಯನ್ನು ಆಧುನೀಕರಣಗೊಳಿಸಿ ಹಲವು ಸೌಲಭ್ಯಗಳನ್ನು ಒದಗಿಸಿ ರಾಜ್ಯದ ಪ್ರಮುಖ ಪ್ರವಾಸಿ ತಾಣವಾಗುವಂತೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಸಾರ್ವಜನಿಕರು ಮತ್ತು ರೈತರ ಪ್ರಮುಖ ಬೇಡಿಕೆಗಳು ಇಂತಿವ: ಭರಮಸಾಗರ ಕೆರೆಯನ್ನು ರಾಜ್ಯ ಮಟ್ಟದ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಬೇಕು. ಕೆರೆಯ ಸುತ್ತಲೂ ಉತ್ತಮ ರಸ್ತೆ, ಉದ್ಯಾನ, ವಾಯುವಿಹಾರ ಮಾರ್ಗ ಹಾಗೂ ವಿಶ್ರಾಂತಿ ಕುರ್ಚಿಗಳ ವ್ಯವಸ್ಥೆ ಮಾಡಬೇಕು. ಗಿಡಮರಗಳ ಸಂರಕ್ಷಣೆ ಹಾಗೂ ನಡುತೋಪು ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಬೇಕು. ಕೆರೆಯ ನೀರು ಅತ್ಯಂತ ಸ್ವಚ್ಛವಾಗಿರಲು ತ್ಯಾಜ್ಯ ವಸ್ತುಗಳು, ಚರಂಡಿ ನೀರು ಹಾಗೂ ಮಾಲಿನ್ಯ ಸೇರುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು. ಜಲಚರ ಪ್ರಾಣಿಗಳು ಮತ್ತು ಪರಿಸರ ಸಂರಕ್ಷಣೆಗೆ ವಿಶೇಷ ಕ್ರಮ ಕೈಗೊಳ್ಳಬೇಕು. ಪ್ರವಾಸಿಗರ ಆಕರ್ಷಣೆಗೆ ದೋಣಿ ವಿಹಾರ, ವೀಕ್ಷಣಾ ತಾಣಗಳು ಹಾಗೂ ಪರಿಸರ ಸ್ನೇಹಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಬೇಕು. ಭರಮಸಾಗರವನ್ನು ಮಧ್ಯ ಕರ್ನಾಟಕದ ಪ್ರಮುಖ ಪರಿಸರ ಪ್ರವಾಸೋದ್ಯಮ ಕೇಂದ್ರವನ್ನಾಗಿ ಘೋಷಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದಿದ್ದಾರೆ.

ಚಿತ್ರದುರ್ಗ ಜಿಲ್ಲೆ ಇಂದು ಮಾನ್ಯ ಯಡಿಯೂರಪ್ಪನವರ 50 ವರ್ಷದ ರಾಜಕೀಯ ಅನುಭವದ ಹೆಮ್ಮೆಯನ್ನು ಆಚರಿಸುತ್ತಿದ್ದು, ಮೇ 9ರಂದು ನಡೆಯಲಿರುವ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ ದೇಶದ ಪ್ರಮುಖ ನಾಯಕರು ಆಗಮಿಸುತ್ತಿರುವುದು ಜಿಲ್ಲೆಯ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ. ಇಂತಹ ಐತಿಹಾಸಿಕ ಸಂದರ್ಭದಲ್ಲಿ ಮಧ್ಯ ಕರ್ನಾಟಕದ ದೀರ್ಘ ಕಾಲದ ಬೇಡಿಕೆಯಾಗಿರುವ ಭರಮಸಾಗರ ಪ್ರವಾಸಿ ತಾಣದ ಕನಸಿಗೆ ಚಾಲನೆ ದೊರಕಬೇಕೆಂದು ಕೋರಿದ್ದಾರೆ.



ಕೆರೆಗೆ ಭೇಟಿ ನೀಡಿ ಪರಿಶೀಲಿಸಿದ ತರಳಬಾಳು ಶ್ರೀ ಜತೆ ಶಾಸಕ ಎಂ.ಚಂದ್ರಪ್ಪ.

ಸಿಎಂ ಕುರ್ಚಿ ಗೊಂದಲ ಬಗೆಹರಿಸಲಿ: ಜಾರಕಿಹೊಳಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಗೊಂದಲ ಇದ್ದು, ವಿಚಾರದ ಬಗ್ಗೆ ನಾನು ಉತ್ತರ ಕೊಡುವುದಿಲ್ಲ. ಆದಷ್ಟು ಬೇಗನೆ ಇಂತಹ ಗೊಂದಲ ಬಗೆಹರಿಸಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ಪಕ್ಷದ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ನಗರದಲ್ಲಿ ತಮ್ಮ ಆಪ್ತರ ಕುಟುಂಬದ ಮದುವೆಗೆ ಆಗಮಿಸಿದ್ದ ವೇಳೆ ಬಾಪೂಜಿ ಹೆಲಿಪ್ಯಾಡ್‌ನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಹೈಕಮಾಂಡ್ ಬಯಸಿದರೆ ಐದು ವರ್ಷ ತಾವೇ ಸಿಎಂ ಎಂಬುದಾಗಿ ಸಿದ್ದರಾಮಯ್ಯ ಹೇಳಿದ್ದು, ಅದು ಸಿಎಂಗೆ ಸಂಬಂಧಿಸಿದ್ದು. ಸಿಎಂ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡಲು ಆಗಲ್ಲ ಎಂದರು.

ಪಕ್ಷದಲ್ಲಿ ಗೊಂದಲ ಇರುವುದು ನಿಜ. ಶೀಘ್ರವೇ ದೆಹಲಿಯಲ್ಲಿ ಸಭೆ ಇದೆ. ಗೊಂದಲ ಬಗೆಹರಿಸಬೇಕು ಎಂಬುದು ನಮ್ಮ ಮನವಿಯಾಗಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೋ, ಇಲ್ಲವೋ ನಮಗೆ ಗೊತ್ತಿಲ್ಲ. ಆದರೆ, ಗೊಂದಲ ಮೊದಲು ಬಗೆಹರಿಸಬೇಕಾಗಿದೆ. ಮುಖ್ಯಮಂತ್ರಿ ಕುರ್ಚಿ ವಿಚಾರದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೆಸರು ಮುನ್ನೆಲೆಗೆ ಬಂದ ವಿಚಾರ ತಮಗೆ ಗೊತ್ತಿಲ್ಲ ಎಂದು ತಿಳಿಸಿದರು.

ನನಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡುವಂತೆ ಕೆಲವರು ಆಗ್ರಹಿಸುತ್ತಿದ್ದಾರೆ. ಅದೆಲ್ಲಾ ಹೈಕಮಾಂಡ್‌ಗೆ ಬಿಟ್ಟ ವಿಚಾರ. ನಮ್ಮ ಹೈಕಮಾಂಡ್ ಎಲ್ಲವನ್ನೂ ಗಮನಿಸುತ್ತದೆ. ಕಾದು ನೋಡೋಣ. ಯಾರಿಗೆ ಯಾವ ಸ್ಥಾನ ನೀಡಬೇಕೆಂಬುದನ್ನು ವರಿಷ್ಠರು ಸೂಕ್ತ ಸಮಯದಲ್ಲಿ ತೀರ್ಮಾನ ಮಾಡುತ್ತಾರೆ ಎಂದು ಪ್ರಶ್ನೆಯೊಂದಕ್ಕೆ ಸತೀಶ ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಚಿತ್ರದುರ್ಗದಲ್ಲಿ ಮೇ 9ಕ್ಕೆ ಯಡಿಯೂರಪ್ಪ ಅಭಿನಂದನೋತ್ಸವ ಮಾಡುತ್ತಿದ್ದು, ಯಡಿಯೂರಪ್ಪ ಅವರಿಗೆ ಒಳ್ಳೆಯದಾಗಲಿ. ಬಿಎಸ್‌ವೈ ಹೋರಾಟಗಾರರು. ಬಹಳ ಕೆಳ ಹಂತದಿಂದ ಇಲ್ಲಿವರೆಗೆ ಬಂದಿದ್ದಾರೆ. ರಾಜಕೀಯವೇ ಬೇರೆ, ಪಕ್ಷಗಳೇ ಬೇರೆ. ಆದರೆ, ವೈಯಕ್ತಿಕವಾಗಿ ಒಬ್ಬ ಹೋರಾಟಗಾರನಾಗಿ ಇಷ್ಟೆಲ್ಲಾ ಬೆಳೆದಿರುವ ಯಡಿಯೂರಪ್ಪನವರಿಗೆ ನಾನು ಅಭಿನಂದಿಸುತ್ತೇನೆ. ಇದೇ ಯಡಿಯೂರಪ್ಪನವರು ತಮ್ಮ ಪಕ್ಷದಲ್ಲಿರುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಸಲಹೆ ನೀಡುವೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸಹ ಹುಷಾರಾಗಿ ಹೆಜ್ಜೆ ಇಟ್ಟರೆ ಯಶಸ್ವಿಯಾಗುತ್ತಾರೆ ಎಂದು ಸಲಹೆ ನೀಡಿದರು. ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ ವೀರಣ್ಣ, ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಪ್ರೊ. ಎ.ಬಿ.ರಾಮಚಂದ್ರಪ್ಪ, ಶ್ಯಾಗಲೆ ಮಂಜುನಾಥ, ಹಿರಿಯ ವಕೀಲ ಆಂಜನೇಯ ಗುರೂಜಿ ಇದ್ದರು.

ಎಪಿಎಂಸಿ ಆವರಣದಲ್ಲಿ ದಾಳಿಂಬೆ ಖರೀದಿ ಕೇಂದ್ರ

ಹಿರಿಯೂರು: ನಗರದ ಎಪಿಎಂಸಿ ಆವರಣದಲ್ಲಿ ನಿಂಜಾ ಕಾರ್ಟ್ ವತಿಯಿಂದ ವಾಣಿವಿಲಾಸ ತೋಟಗಾರಿಕಾ ರೈತ ಉತ್ಪಾದಕ ಕಂಪನಿಯ ಸಹಯೋಗದಲ್ಲಿ ಹಿರಿಯೂರು ಮತ್ತು ಚಿತ್ರದುರ್ಗ ಜಿಲ್ಲೆಯ ಎಲ್ಲಾ ಭಾಗದ ದಾಳಿಂಬೆ ಬೆಳಗಾರರಿಗೆ ಅನುಕೂಲವಾಗಲೆಂದು ದಾಳಿಂಬೆ ಮಾರುಕಟ್ಟೆಯನ್ನು ಶುಕ್ರವಾರ ಪ್ರಾರಂಭಿಸಲಾಯಿತು. ಇಲ್ಲಿ ರೈತರ ವತಿಯಿಂದ ನೇರವಾಗಿ ದಾಳಿಂಬೆಯನ್ನು ಖರೀದಿಸಿ ಯಾವುದೇ ಮಧ್ಯವರ್ತಿಯ ಪ್ರವೇಶವಿಲ್ಲದೆ ದಾಳಿಂಬೆ ಬೆಳೆಯನ್ನು ಗ್ರೇಡಿಂಗ್ ದರದಲ್ಲಿ ವಿವಿಧ ಮಾರುಕಟ್ಟೆಯ ದೈನಂದಿನ ಬೆಲೆಯ ಮೇಲೆ ಹಣ್ಣನ್ನು ಖರೀದಿಸಲಾಗುವುದರಿಂದ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಮನವಿ ಮಾಡಲಾಯಿತು. ಹೆಚ್ಚಿನ ಮಾಹಿತಿಗೆ 9611618341,8050898781 ಸಂಪರ್ಕಿಸಬಹುದು. ಈ ಸಂದರ್ಭದಲ್ಲಿ ಮಾಜಿ ಸಚಿವ ಏಕಾಂತಯ್ಯ, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಓಂಕಾರಪ್ಪ, ನಿಂಜಾ ಕಾರ್ಟ್ ಕಂಪನಿಯ ಮ್ಯಾನೇಜರ್‌ಗಳಾದ ಕಿಶೋರ್‌ಕುಮಾರ್, ಶೈಕ್ ಅಬ್ಜಲ್ ಭಾಷಾ, ಬಾಲಾಜಿ ಆಗ್ರೋ ಕೇಂದ್ರದ ಜಗನ್ನಾಥ್, ವಾಣಿವಿಲಾಸ ತೋಟಗಾರಿಕಾ ರೈತ ಉತ್ಪಾದಕ ಕಂಪನಿಯ ನಿರ್ದೇಶಕ ಜಿ.ವಿ ಸುರೇಶ್, ಅಧ್ಯಕ್ಷ ಲಕ್ಷ್ಮೀಕಾಂತ್, ಸಿಇಒ ಚಿದಾನಂದ್ ಹಲವು ರೈತರು ಇದ್ದರು.

ಆರೋಗ್ಯ ತಪಾಸಣೆ ಶಿಬಿರ

ಹಿರಿಯೂರು: ವೇದಾವತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ತಾಲೂಕಿನ ಮೇಟಿಕುರ್ಕೆ ಗ್ರಾಮದಲ್ಲಿ ಎನ್‌ಎಸ್‌ಎಸ್ ಘಟಕದ ಮೂರನೇ ದಿನದ ಕಾರ್ಯಕ್ರಮದಲ್ಲಿ ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ನಡೆಸಲಾಯಿತು.

ಕನ್ನಡಪ್ರಭ
ಶನಿವಾರ 9.05.2026

ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖವಾದ ಸಮಾನತೆ, ನ್ಯಾಯ ಮತ್ತು ವೈಜ್ಞಾನಿಕತೆಯೇ ನಿಜವಾದ ಅಂಬೇಡ್ಕರ್‌ವಾದ. ಯಾರು ಯಾವ ಜಾತಿ, ಧರ್ಮ, ಲಿಂಗ ಅಥವಾ ಊರಲ್ಲಿ ಹುಟ್ಟ ಬೇಕೆಂಬುದನ್ನು ಆಯ್ಕೆ ಮಾಡಿಕೊಂಡು, ಹುಟ್ಟುವುದಿಲ್ಲ, ಆದರೆ, ಹುಟ್ಟಿದ ನಂತರ ಸಮಾನತಾವಾದಿಗಳಾಗಿ ಬದುಕುವುದು ನಮ್ಮ ಆಯ್ಕೆಯಾಗಿದೆ. .

• **ಚೇತನ್ ಅಹಿಂಸಾ** ಸಾಮಾಜಿಕ ಹೋರಾಟಗಾರ

ನಮ್ಮ ಹೋರಾಟ ಯಾವುದೇ ಜಾತಿ, ಧರ್ಮದ ವಿರುದ್ಧವಲ್ಲ: ಚೇತನ್ ಅಹಿಂಸಾ

ಅನ್ಯಾಯ ವ್ಯವಸ್ಥೆ ವಿರುದ್ಧ ಹೋರಾಟವಾಗಲಿ | ದಾವಣಗೆರೆಯಲ್ಲಿ ಮಹಾನಾಯಕ ಡಾ.ಅಂಬೇಡ್ಕರ್ ಸೇನೆಯಿಂದ ಸಂವಿಧಾನಶಿಲ್ಪಿ ಜಯಂತಿ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ನಮ್ಮ ಹೋರಾಟ ಯಾವುದೇ ಜಾತಿ ಅಥವಾ ಧರ್ಮದ ವಿರುದ್ಧವಲ್ಲ. ಅಸಮಾನತೆ ಮತ್ತು ಅನ್ಯಾಯದಿಂದ ಕೂಡಿದ ವ್ಯವಸ್ಥೆ ವಿರುದ್ಧ ನಮ್ಮ ಹೋರಾಟವಾಗಬೇಕು ಎಂದು ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಹೇಳಿದರು.

ನಗರದಲ್ಲಿ ಶುಕ್ರವಾರ ಮಹಾನಾಯಕ ಡಾ. ಬಿ.ಆರ್. ಅಂಬೇಡ್ಕರ್‌ಸೇನೆಯಿಂದಹಮ್ಮಿಕೊಂಡಿದ್ದಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ಜಯಂತಿಕಾರ್ಯಕ್ರಮವನ್ನು ಬಾಬಾ ಸಾಹೇಬರ ಪುತ್ಥಳಿಗೆ ಮಾಲಾರ್ಪಣೆ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಯಥಾಸ್ಥಿತಿ ವ್ಯವಸ್ಥೆಯೇ ದೊಡ್ಡ ಅನ್ಯಾಯವಾಗಿದ್ದು, ಕೆಳಮಟ್ಟದ ಜನರನ್ನು ಮೇಲಕ್ಕೆತ್ತುವ ಮೂಲಕ ಸಮಸಮಾಜ ನಿರ್ಮಿಸಬೇಕಿದೆ ಎಂದರು.

ಸಮಾನತೆ, ನ್ಯಾಯ, ವೈಜ್ಞಾನಿಕತೆ ಮತ್ತು ಸಂವಿಧಾನದ ಮೌಲ್ಯ ಅಳವಡಿಸಿಕೊಂಡವರು ಯಾರೇ ಆಗಿದ್ದರೂ ಅಂತಹವರು ನಮ್ಮವರೆಂಬ ಭಾವನೆ ಮೂಡಬೇಕು. ಈ ಹೋರಾಟ ಒಂದು ಸಮುದಾಯಕ್ಕೆ ಸೀಮಿತವಾಗದೆ, 7 ಕೋಟಿ ಕನ್ನಡಿಗರ ಸಿದ್ಧಾಂತದ ಹೋರಾಟವಾಗಬೇಕು.



ದಾವಣಗೆರೆಯಲ್ಲಿ ಶುಕ್ರವಾರ ಮಹಾನಾಯಕ ಡಾ. ಬಿ.ಆರ್. ಅಂಬೇಡ್ಕರ್‌ಸೇನೆಯಿಂದ ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜಯಂತಿಯಲ್ಲಿ ಚೇತನ್ ಅಹಿಂಸಾ, ಮೈಲಾರಪ್ಪ, ಚನ್ನಮ್ಮ ಆವರಗೆರೆ ಇತರರು ಪಾಲ್ಗೊಂಡರು.

ನಾವು ಬಲ ಪಂಥೀಯರೂ ಅಲ್ಲ, ಎಡ ಪಂಥದವರೂ ಅಲ್ಲ, ಮನುವಾದ ಮಧ್ಯಪಂಥವೂ ಅಲ್ಲ. ನಮ್ಮದೇ ಆದ ಅಂಬೇಡ್ಕರ್, ಪೆರಿಯಾರ್, ಕಾನ್ಶೀರಾಂ ಅವರ ಸತ್ಯಪಂಥದ ಚಿಂತನೆಗಳ ಆಧಾರದಲ್ಲಿ ಸಮಾಜ ಕಟ್ಟಿದಾಗ ಮಾತ್ರ ರಾಜ್ಯದಲ್ಲಿ ನಿಜವಾದ ಸಮಾನತೆಯ ಆಡಳಿತ ಸಾಧ್ಯ ಎಂದು ಅವರು ಅಭಿಪ್ರಾಯಪಟ್ಟರು.

ಸಂವಿಧಾನದ ಪೀಠಿಕೆಯಲ್ಲಿ ಉಲ್ಲೇಖವಾದ ಸಮಾನತೆ, ನ್ಯಾಯ ಮತ್ತು ವೈಜ್ಞಾನಿಕತೆಯೇ ನಿಜವಾದ ಅಂಬೇಡ್ಕರ್‌ವಾದ. ಯಾರು ಯಾವ ಜಾತಿ, ಧರ್ಮ, ಲಿಂಗ ಅಥವಾ ಊರಲ್ಲಿ ಹುಟ್ಟ ಬೇಕೆಂಬುದನ್ನು ಆಯ್ಕೆ ಮಾಡಿಕೊಂಡು, ಹುಟ್ಟುವುದಿಲ್ಲ. ಆದರೆ, ಹುಟ್ಟಿದ ನಂತರ ಸಮಾನತಾವಾದಿಗಳಾಗಿ ಬದುಕುವುದು ನಮ್ಮ ಆಯ್ಕೆಯಾಗಿದೆ. ಸಮಾಜಕ್ಕೆ ವಾಪಸ್ ಕೊಡಬೇಕೆಂಬ ಮನೋಭಾವವೇ ಬದಲಾವಣೆಯ ಬೀಜ. ಬಾಬಾ ಸಾಹೇಬರುಹೇಳಿದಶಿಕ್ಷಣ, ಚಳವಳಿ ಮತ್ತುಸಂಘಟನೆಯ ಸಂದೇಶ ಕೇವಲ ಘೋಷಣೆ ಅಲ್ಲ; ಅದು ದೇಶ ನಿರ್ಮಾಣದ ದಿಕ್ಕು ಎಂದು ಅವರು ತಿಳಿಸಿದರು.

ಅಂಬೇಡ್ಕರ್ ಅವರನ್ನು ಕೇವಲ ಸಂವಿಧಾನ ಶಿಲ್ಪಿ ಅಥವಾ ಭಾರತ ರತ್ನವೆಂದು ಸೀಮಿತ ಪರಿಧಿಯಲ್ಲಿ ನೋಡದೇ, ಆ ಮಹನೀಯರ ಸಮಾನತಾವಾದಿ ಚಿಂತನೆ ಮತ್ತುಕ್ರಾಂತಿಕಾರಿದೃಷ್ಟಿಕೋನಅರ್ಥಮಾಡಿಕೊಳ್ಳಬೇಕು. ಇತಿಹಾಸದಲ್ಲಿ ದೊಡ್ಡ ಬದಲಾವಣೆಗಳು ಲಕ್ಷಾಂತರ ಜನರ ಗುಂಪಿನಿಂದ ಮಾತ್ರ ಆಗಿಲ್ಲ. ಕೆಲವರು ದೃಢವಾಗಿ ನಿಂತು ದಿಕ್ಕು ತೋರಿಸಿದಾಗಲೇ ಪರಿವರ್ತನೆಯಾಗಿದೆ. ನಾವು ನದಿಯಲ್ಲಿ ಕೊಚ್ಚಿ ಹೋಗುವ ಮಣ್ಣಾಗಬಾರದು. ನದಿಯ ದಿಕ್ಕು ಬದಲಿಸುವ ಬಂಡೆಗಳಾಗಬೇಕು ಎಂದು ಅಂಬೇಡ್ಕರ್‌ಹೇಳಿದ್ದಾರೆ. ಹಾಗಾಗಿ, ಸಮಾಜ ಪರಿವರ್ತನೆಗೆ ಎಲ್ಲರೂ ಕೈ ಜೋಡಿಸಬೇಕು ಎಂದರು.

ಬಾಬಾಸಾಹೇಬ್‌ಅಂಬೇಡ್ಕರ್‌ವಾದದಅರ್ಥವೆಂದರೆ, ಅಂಬೇಡ್ಕರ್‌ಫೋಟೋ, ಪುತ್ಥಳಿ ಅಥವಾ ದೊಡ್ಡ ಯೋಜನೆಗಳಿಂದ ಅಂಬೇಡ್ಕರ್‌ವಾದ ಬರುವುದಿಲ್ಲ. ಸಮಸಮಾಜ ನಿರ್ಮಾಣವೇ ನಿಜವಾದ ಅಂಬೇಡ್ಕರ್ ವಾದ. ಇದನ್ನು ನಾವು ಅರಿಯಬೇಕಿದೆ. ನಾಯಕರ ಆರಾಧನೆ ಮತ್ತು ವ್ಯಕ್ತಿ ಆರಾಧನೆಯನ್ನು ಬಾಬಾ ಸಾಹೇಬರುಒಪ್ಪಲಿಲ್ಲ. ಅಂತಹವರನ್ನುಪೂಜಿಸುವುದಕ್ಕಿಂತ ಓದಬೇಕು, ಬಬಾ ಸಾಹೇಬರು ಕಂಡ ಕನಸನ್ನು ಸಾಕಾರಗೊಳಿಸಬೇಕು. ಅದು ಯುವಜನತೆ ಮೇಲಿದೆ. ಇತಿಹಾಸದ ತಪ್ಪುಗಳನ್ನು ಸರಿಪಡಿಸುವುದೇ ನ್ಯಾಯ. ವಂಚಿತರಿಗೆ ಹೆಚ್ಚಿನ ಅವಕಾಶ ಮತ್ತು ಸೌಲಭ್ಯ ದೊರೆಯಬೇಕು, ಸಮಾಜದಲ್ಲಿ ಹೆಚ್ಚಾಗಿ ಪಡೆದವರು ಹೆಚ್ಚಿನ ಹೊಣೆ ಹೊತ್ತು ವಾಪಸ್ ಕೊಡಬೇಕೆಂದರು.

ಸೇನೆ ಜಿಲ್ಲಾಧ್ಯಕ್ಷ ಎನ್.ಡಿ. ಮೈಲಾರಪ್ಪ, ಜಿಲ್ಲಾ ಮಹಿಳಾ ಅಧ್ಯಕ್ಷೆ ಚನ್ನಮ್ಮ ಆವರಗೆರೆ, ನಟ ವಿಜಯ ಜಯ್ಕರ್, ಮುಖಂಡರಾದ ನಾರಾಯಣ ಸ್ವಾಮಿ, ಎಂ. ಸುರೇಶ, ದೇವರಾಜ, ದೇವದಾಸ, ವಿಠಲ್ ಇತರರು ಇದ್ದರು.

11ರಂದು ಬೇಸಿಗೆ ಶಿಬಿರ ಸಮಾರೋಪ

ದಾವಣಗೆರೆ: ನಗರದ ಬಾಲಭವನ ಸೊಸೈಟಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾ ವತಿಯಿಂದ ಏ.27ರಿಂದ ಮೇ 11 ರವರೆಗೆ ಏರ್ಪಡಿಸಿದ್ದ ಜಿಲ್ಲಾಮಟ್ಟದ ಉಚಿತ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ ಮೇ 11ರಂದು ಬೆಳಗ್ಗೆ 10.30 ಗಂಟೆಗೆ ಜೆ.ಎಚ್. ಪಟೇಲ್ ಬಡಾವಣೆಯ ಜಿಲ್ಲಾ ಬಾಲಭವನದಲ್ಲಿ ಏರ್ಪಡಿಸಲಾಗಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಜಿಲ್ಲಾ ಬಾಲಭವನ ಸಮಿತಿ ಅಧ್ಯಕ್ಷರಾದ ಗಿತ್ತೆ ಮಾಧವ ವಿಠ್ಠಲ ರಾವ್ ಕಾರ್ಯಕ್ರಮ ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ರಾಜಾನಾಯ್ಕ, ಇತರರು ಭಾಗವಹಿಸುವರು.

ಬಸ್ ಪಲ್ಟಿ: ವಿದ್ಯಾರ್ಥಿ ಸಾವು, 7 ಜನ ಗಂಭೀರ

• **ಕನ್ನಡಪ್ರಭ ವಾರ್ತೆ** ದಾವಣಗೆರೆ

ಹಳೇ ಸರ್ಕಾರಿ ಬಸ್‌ನ ಆಕ್ಸೆಲ್ ತುಂಡಾಗಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ ಓರ್ವ ಪದವಿ ವಿದ್ಯಾರ್ಥಿ ಸಾವನ್ನಪ್ಪಿ, 7 ಜನ ಗಂಭೀರ ಗಾಯಗೊಂಡ ಘಟನೆ ಚನ್ನಗಿರಿ ತಾ. ಬಸವಾಪಟ್ಟಣ ಸಮೀಪದ ಮರಬನಹಳ್ಳಿಯ ಬಳಿ ಶುಕ್ರವಾರ ಬೆಳಗ್ಗೆ ಸಂಭವಿಸಿದೆ. ಗಾಯಾಳುಗಳನ್ನು ದಾವಣಗೆರೆ ಜಿಲ್ಲಾಸ್ಪತ್ರೆ, ಖಾಸಗಿ ಆಸ್ಪತ್ರೆಗಳಿಗೆ, ಬಸವಾಪಟ್ಟಣದ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ.

ಕುಂದೂರು ವಾಸಿ, ಬಿಕಾಂ ವಿದ್ಯಾರ್ಥಿ ದರ್ಶನ್ (21) ಘಟನೆಯಲ್ಲಿ ಸಾವನ್ನಪ್ಪಿದ್ದು, ಮಕ್ಕಳು, ಹಿರಿಯರು, ಮಹಿಳೆಯರು, ವಯೋವೃದ್ಧರು ಸೇರಿದಂತೆ 7 ಜನ ಗಂಭೀರ ಗಾಯಗೊಂಡಿದ್ದಾರೆ. ಸರ್ಕಾರಿ ಬಸ್ ದಾವಣಗೆರೆಯಿಂದ ಬಸವಾಪಟ್ಟಣ ಮಾರ್ಗವಾಗಿ ಹೊನ್ನಾಳಿ ಕಡೆಗೆ ಸಾಗುತ್ತಿದ್ದಾಗ ಮರಬನಹಳ್ಳಿ ಬಳಿ ಈ ದುರಂತ ಸಂಭವಿಸಿದೆ.

ಬಸ್ ಸಂಪೂರ್ಣ ನಜ್ಜುಗುಜ್ಜಾಗಿದೆ. ಗಾಯಾಳುಗಳಲ್ಲಿ ಶಾಲಾ-ಕಾಲೇಜು ಮಕ್ಕಳು, ಮಹಿಳೆಯರುಹೆಚ್ಚಿನಸಂಖ್ಯೆಯಲ್ಲಿದ್ದಾರೆ. ಪೊಲೀಸರು ಸ್ಥಳಕ್ಕೆ ಧಾವಿಸಿ, ಸ್ಥಳೀಯರು, ದಾರಿಹೋಕರ ನೆರವಿನಿಂದ ರಕ್ಷಣಾ ಕಾರ್ಯ ಕೈಗೊಂಡರು. 108 ಆಂಬ್ಯುಲೆನ್ಸ್ ಮತ್ತು ಖಾಸಗಿ ವಾಹನಗಳ ಮೂಲಕ ಗಾಯಾಳುಗಳನ್ನು ಬಸವಾಪಟ್ಟಣ ಸರ್ಕಾರಿ ಆಸ್ಪತ್ರೆ



ಹಾಗೂ ದಾವಣಗೆರೆ ಜಿಲ್ಲಾ ಆಸ್ಪತ್ರೆ, ಖಾಸಗಿ ಆಸ್ಪತ್ರೆಗಳಿಗೆ ರವಾನಿಸಲಾಯಿತು.

ದಾವಣಗೆರೆ-ಹೊನ್ನಾಳಿ ಮಾರ್ಗದಲ್ಲಿ ಸಾಗುತ್ತಿದ್ದ ಈ ಹಳೆ ಸರ್ಕಾರಿ ಬಸ್ ದುರಸ್ತಿಪಡಿಸುವಂತೆ ಅಥವಾ ಬೇರೆ ಬಸ್ ಈ ಮಾರ್ಗದಲ್ಲಿ ಬಿಡುವಂತೆ ಮಾರ್ಗದ ಗ್ರಾಮಸ್ಥರು, ಸ್ಥಳೀಯರು, ಪ್ರಯಾಣಿಕರು ಹೊನ್ನಾಳಿ ಶಾಸಕ ಡಿ.ಜಿ.ಶಾಂತನಗೌಡ ಅವರಿಗೆ ಸಾಕಷ್ಟು ಸಲ ಮನವಿ ಮಾಡಿದ್ದು ಗಮನೀಯ.

ಪರಿಹಾರಕ್ಕೆ ಸೂಚನೆ: ಬಸ್ ಅಪಘಾತದ ವಿಷಯ ತಿಳಿದು ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಬೆಂಗಳೂರಿನಿಂದಲೇ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿ, ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ನೀಡುವಂತೆ ತಿಳಿಸಿದ್ದಾರೆ. ಮೃತಪಟ್ಟ ವಿದ್ಯಾರ್ಥಿ ಕುಟುಂಬಕ್ಕೆ ಕನಿಷ್ಠ 10 ಲಕ್ಷ ಪರಿಹಾರ, ಗಾಯಾಳುಗಳೆಲ್ಲರಿಗೂ ಸೂಕ್ತ ಪರಿಹಾರ ಹಾಗೂ ಚಿಕಿತ್ಸೆ ವೆಚ್ಚ ಭರಿಸಲು ಸಹ ಸೂಚನೆ ನೀಡಿದ್ದಾರೆ.

ವಿಷಯ ತಿಳಿದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಎಂ.ಬಸವರಾಜ ನಾಯ್ಕ ಸೇರಿದಂತೆ ಅನೇಕರು ಘಟನಾ ಸ್ಥಳಕ್ಕೆ, ಆಸ್ಪತ್ರೆಗೆ ಭೇಟಿ ನೀಡಿ, ಮೃತ ವಿದ್ಯಾರ್ಥಿ ಕುಟುಂಬಕ್ಕೆ ಸಾಂತ್ವನ ಹೇಳಿದರು. ಗಾಯಾಳುಗಳು ಮತ್ತು ಕುಟುಂಬಕ್ಕೆ ಧೈರ್ಯ ತುಂಬಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ತೆರಳಿದ್ದ ಗಾಯಾಳುಗಳ ಪೈಕಿ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದವರಿಗೆ ತಕ್ಷಣವೇ ದಾವಣಗೆರೆ ಜಿಲ್ಲಾಸ್ಪತ್ರೆ, ಖಾಸಗಿ ಆಸ್ಪತ್ರೆಗೆ ಆಂಬ್ಯುಲೆನ್ಸ್‌ಗಳಲ್ಲಿ ಕಳಿಸಿಕೊಡುವಂತೆ ಹೇಳಿದರು.

ಜಿಲ್ಲಾಧಿಕಾರಿ ಭೇಟಿ: ದಾವಣಗೆರೆ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರ ಸ್ವಾಮಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ಸ್ಥಿತಿ ವಿಚಾರಿಸಿದರು. ಸಂತ್ರಸ್ತರಿಗೆ, ಅವರ ಕುಟುಂಬದವರಿಗೆ ಧೈರ್ಯ ಹೇಳಿ, ಘಟನೆಗೆ ವಿಷಾದ ವ್ಯಕ್ತಪಡಿಸಿದರು. ವೈದ್ಯರೊಂದಿಗೆ ಚರ್ಚಿಸಿ, ಗಾಯಾಳುಗಳಿಗೆ ತುರ್ತು ಮತ್ತು ಗುಣಮಟ್ಟದ ಚಿಕಿತ್ಸೆ ನೀಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಗಂಭೀರವಾಗಿ ಗಾಯಗೊಂಡವರಿಗೆ ವಿಶೇಷ ನಿಗಾ ವಹಿಸಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

PUBLIC NOTICE

NOTICE is hereby given to the general public that the undersigned is conducting due diligence and investigating the title deeds pertaining to the schedule property described herein below, with a view to purchasing the said property from the present owner, name: Sri. D. R. Ramanna S/o Late. K. Rangappa. aged about 66 years Occ: Agriculturist holding Adhar Card No: 4021 0302 7063. PAN No. DTNPR2297M, R/o Heggere Village, Kasaba Hobli, Challakere Taluk, Chitradurga District,

The aforementioned owner has represented that he is the sole and the absolute and beneficial owner of the schedule property, holding peaceful undisturbed possession and enjoyment thereof, and possess clear, valid, and marketable title to the same. He is further represented that, save and except himself, no other person, entity, firm, or financial institution has or claims to have any right title, interest, claim, lien, charge or encumbrance of any nature whatsoever over the said property.

ANY person(s), firm, entity, or financial institution claiming any right title interest, lien, charge encumbrance or enforceable right in relation to the schedule properties, OR having any objection of any nature to the proposed transaction or to the possession custody or deposit of the title deeds. pertaining to the schedule properties, is hereby REQUIRED to lodge such claim and/or objection(s) in writing to the undersigned Advocate, together with all relevant supporting documents, SEVEN (07) DAYS from the date of publication of this Notice.

FAILURE to lodge any such claim or objection within the stipulated period shall be deemed to constitute an irrevocable admission that no valid claims. objections. or encumbrances subsist, and my client shall proceed to complete the sale transaction with the aforesaid owners, subject to compliance with all other statutory regulatory and legal formalities.

SCHEDULED PROPERTY

(1) All that piece and parcel of agricultural dry land bearing Re.Sy.No. 28/8. Khatha No: 558, assessed to land Revenue at Rs.1-13 paisa, totally measuring 1Acre 15Gunte land situated in Heggere Village, Kasaba Hobli, Challakere Taluk, Chitradurga District, which is bounded by: On the East: Re.Sy.No.28/9 land: On the West: Re.Sy.No.28/7 land: On the North: Re.Sy.No.27/2 land: On the South: Re.Sy.No.28/6 land:

(2) All that piece and parcel of agricultural dry land bearing Re.Sy.No. 28/9. Khatha No: 558, assessed to land Revenue at Rs.1-17 paisa, totally measuring 1Acre 17Gunte land situated in Heggere Village, Kasaba Hobli, Challakere Taluk, Chitradurga District, which is bounded by: On the East: Re.Sy.No.28/10 land: On the West: Re.Sy.No.28/8 land: On the North: Re.Sy.No.27/1 & 27/2 lands: On the South: Re.Sy.No.28/6 land;

(3) All that piece and parcel of agricultural dry land bearing Re.Sy.No. 28/10. Khatha No: 558, assessed to land Revenue at Rs.1-38 paisa, totally measuring 1Acre 27Gunte land situated in Heggere Village, Kasaba Hobli, Challakere Taluk, Chitradurga District, which is bounded by: On the East: Re.Sy.No. 26/1, 29/10 & 29/7 lands: On the West: Re.Sy.No.29/9 lands: On the North: Re.Sy.No.27/1 lands: On the South: Re.Sy.No.28/6 lands.

**Thursday,
07 May 2026.**

**K.E.MALLIKARJUNA, Advocate
Roll No. KAR/797/1997
Pavan Law Associates, "Shankara Nilaya"
JCR Extension 4th Cross (East side)
Chitradurga-577501 KARNATAKA
Mob: 9880747488.**

**ಕೆನರಾ ಬ್ಯಾಂಕ್
Canara Bank**
(ಭಾರತ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಮುಖ್ಯ ಕಛೇರಿ : ಬೆಂಗಳೂರು
ಪ್ರಾದೇಶಿಕ ಕಚೇರಿ : ದಾವಣಗೆರೆ.
ಶಾಖೆ : ಮಲ್ಲಾಡಿಹಳ್ಳಿ – 577 531.
ಚಿತ್ರದುರ್ಗ ಜಿಲ್ಲೆ. ಮೊ:9850985181
ಇ-ಮೇಲ್: cb11002@canarabank.com

ಮಾರಾಟ ಸೂಚನೆ

(ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಸೂಚನೆ)

ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ 2002 ಹಾಗೂ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು 2002ರ ನಿಯಮ 8(6) ಮತ್ತು 9ರ ಅಡಿಯಲ್ಲಿ ಜಾರಿಗೊಳಿಸಲಾಗಿರುವ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಕುರಿತ ಸೂಚನೆ.

ಈ ಪ್ರಕಟಣೆಯ ಮೂಲಕ ತಿಳಿಸುವುದೇನಂದರೆ, ಕೆಳಗೆ ವಿವರಿಸಿದ ಸ್ಥಿರಾಸ್ಥಿಗಳನ್ನು ಸುರಕ್ಷಿತ ಸಾಲಗಾರರಿಗೆ ಅಡಮಾನ ಇಡಲಾಗಿದೆ/ವಿಧಿಸಲಾಗಿದೆ ಎಂದು ಸಾರ್ವಜನಿಕರಿಗೆ ಮತ್ತು ವಿಶೇಷವಾಗಿ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಸೂಚಿಸಲಾಗಿದೆ. ಇದರ ರಚನಾತ್ಮಕ /ಭೌತಿಕ ಸಾಂಕೇತಿಕ ಸ್ವಾಧೀನವನ್ನು ಕೆನರಾ ಬ್ಯಾಂಕಿ, ಮಲ್ಲಾಡಿಹಳ್ಳಿ ಶಾಖೆಯ ಅಧಿಕೃತ ಅಧಿಕಾರಿಯವರು ತೆಗೆದುಕೊಂಡಿದ್ದಾರೆ. ಸುರಕ್ಷಿತ ಸಾಲಗಾರರು ತಮಗೆ ಬರಬೇಕಾಗಿರುವ ಬಾಕಿ ವಸೂಲಿಗಾಗಿ ದಿನಾಂಕ 30.05.2026ರಂದು "ಎಲ್ಲಿದೆಯೋ ಹಾಗೆ, ಹೇಗಿದೆಯೋ ಹಾಗೆ ಮತ್ತು ಏನಿದೆಯೋ ಹಾಗೆ" ಇ–ಹರಾಜು ಮುಖಾಂತರ ಮಾರಾಟ ಮಾಡುಲಾಗುವುದು. ವಿವರಗಳು ಕೆಳಗಿನಂತಿವೆ :

1. ಸಾಲ ನೀಡಿದವರ ಹೆಸರು ಮತ್ತು ವಿಳಾಸ	ಕೆನರಾ ಬ್ಯಾಂಕ್, ಮಲ್ಲಾಡಿಹಳ್ಳಿ ಶಾಖೆ, ಮೊ : 98509 85181
2. ಸಾಲಗಾರರ ಹೆಸರು ಮತ್ತು ವಿಳಾಸ	1. ನಾಗೇಂದ್ರಪ್ಪ ಎಂ. (ಸಾಲಗಾರರು) ಬಿನ್ ಮಹದೇವಪ್ಪ ಕೆಂಗುಂಟೆ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.–577531 2. ತಿಮ್ಮಪ್ಪ ಎಂ.ಇ. (ಜಾಮೀನುದಾರರು) ಬಿನ್ ಲೇಟ್ ಈಶ್ವರಪ್ಪ ಕೆಂಗುಂಟೆ ಮತ್ತು ಪೋಸ್ಟ್, ಹೊಳಲ್ಕೆರೆ ತಾಲ್ಲೂಕು.
3. ಬರಬೇಕಾದ ಬಾಕಿ ಮೊತ್ತ ದಿನಾಂಕ : 02/03/2026ಕ್ಕೆ ಇರುವಂತೆ	ರೂ. 7,56,885.39 (ಏಳು ಲಕ್ಷದ ಐವತ್ತಾರು ಸಾವಿರದ ಎಂಟು ನೂರಾ ಎಂಭತ್ತೈದು ರೂಪಾಯಿಗಳು ಮತ್ತು ಪೈಸೆ ಮೂವತ್ತೊಂಭತ್ತು ಮಾತ್ರ)
4. ಎ) ಹರಾಜು ವಿಧಾನ : ಬಿ) ಹರಾಜು ಸೇವಾ ಪೂರೈಕೆದಾರರ ವಿವರ ಸಿ) ಹರಾಜು ದಿನಾಂಕ ಮತ್ತು ಸಮಯ : ಡಿ) ಹರಾಜು ಸ್ಥಳ :	ಇ–ಹರಾಜು ಮೆ. ಪಿಎಸ್‌ಬಿ ಅಲಾಯನ್ಸ್ ಲಿ., (ebkray) support.ebkray@psballiance.com, Website: https://ebkray.in/. 30–05–2026 (ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.30ರ ಒಳಗೆ) ಕೆನರಾ ಬ್ಯಾಂಕ್, ಮಲ್ಲಾಡಿಹಳ್ಳಿ ಶಾಖೆ
5. ಸ್ವತ್ತುಗಳ ವಿವರ	ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಕೆಂಗುಂಟೆ ಗ್ರಾಮನಲ್ಲಿರುವ ಆಸ್ತಿ ನಂ. 21ಬಿ, ಖಾತೆ ನಂ. 399, ವಿಸ್ತೀರ್ಣ : 28'x 34'= 952 ಚ.ಅಡಿ ನಿರ್ಮಿತ ಪ್ರದೇಶ : ನೆಲ ಮಹಡಿ : 775 ಚ.ಅಡಿ, ಇದಕ್ಕೆ ಚೆಕ್ಕುಬಂದಿ :– ಪೂರ್ವಕ್ಕೆ : ಗೌಡ್ರ ಬಸವಂತಪ್ಪ ನವರ ಸೈಟು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಸ್ತೆ
6. ಮೀಸಲು ಬೆಲೆ : 7. ಇಎಂಡಿ :	ರೂ. 3,56,000/– (ಮೂರು ಲಕ್ಷದ ಐವತ್ತಾರು ಸಾವಿರ ರೂಪಾಯಿಗಳು ಮಾತ್ರ) ರೂ. 35,600/– (ಮೂವತ್ತೈದು ಸಾವಿರದ ಆರು ನೂರು ರೂಪಾಯಿಗಳು ಮಾತ್ರ)
8. ಸ್ವತ್ತುಗಳ ವೀಕ್ಷಣೆಯ ದಿನಾಂಕ ಮತ್ತು ಸಮಯ	ದಿನಾಂಕ 29.05.2026 ಬೆಳಿಗ್ಗೆ 10.00 ರಿಂದ 5.00ರ ವರೆಗೆ
9. ಋಣ ಭಾರಗಳ ವಿವರ	ತಿಳಿದಿಲ್ಲ
10.ವ್ಯಾಜ್ಯಗಳ ವಿವರ	ತಿಳಿದಿಲ್ಲ

9. ಇತರ ನಿಯಮ ಮತ್ತು ನಿಬಂಧನೆಗಳು :

ಎ) ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" " "ಯಾವುದೇ ಅವಲಂಬನೆ ಇಲ್ಲದೇ" ಸ್ಥಿತಿಯಲ್ಲಿ ಮಾರಾಟ ಮಾಡಲಾಗುತ್ತದೆ, ಮೇಲಿನ ಕೋಷ್ಟಕದಲ್ಲಿ ಕ್ರಸಂ. 9 & 10 ರಲ್ಲಿ ಉಲ್ಲೇಖಿಸಲಾದ ಋಣಭಾರಗಳು, ಯಾವುದಾದರೂ ಇದ್ದರೆ ಸೇರಿದಂತೆ. ಋಣಭಾರ ಮತ್ತು ಮೊಕದ್ದಮೆಯ ವಿವರಗಳಿಗಾಗಿ, ಕೆಳಗೆ 11 (e) ರಲ್ಲಿ ಉಲ್ಲೇಖಿಸಲಾದ ಭದ್ರತಾ ಠೇವಣಿ ಮೊತ್ತ (EMD) ವನ್ನು ಠೇವಣಿ ಮಾಡುವ ಮೊದಲು ಕೆಳಗೆ ಸಹಿ ಮಾಡಿದ ಅಧಿಕೃತ ಕಚೇರಿಯನ್ನು ಸಂಪರ್ಕಿಸಿ. ಇಎಆ ಠೇವಣಿ ಮಾಡಿದ ನಂತರ, ಬಿಡ್ದುದಾರರು ಹರಾಜಿನಲ್ಲಿ ಭಾಗವಹಿಸಿದ್ದರೆ, ಹರಾಜಿನ ರದ್ದತಿ ಮತ್ತು ಬಿಡ್ ಮೊತ್ತದ ಮರುಪಾವತಿಗೆ ಸಂಬಂಧಿಸಿದ ನಂತರದ ಹಕ್ಕು/ ವಿನಂತಿಯನ್ನು ಪರಿಗಣಿಸಲಾಗುವುದಿಲ್ಲ.

ಬಿ) ಮೇಲ್ಕಂಡ ಆಸ್ತಿಗಳನ್ನು ನಿಗದಿಪಡಿಸಿದ ಮೀಸಲು ಬೆಲೆಗಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾಗುವುದು.

ಸಿ) ಸದರಿ ಆಸ್ತಿಗಳನ್ನು ದಿನಾಂಕ 29/ 05/ 2026 ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆಯೊಳಗಾಗಿ ವೀಕ್ಷಿಸಬಹುದು.

ಡಿ) ಸಂಭಾವ್ಯ ಬಿಡ್ದುದಾರರು https://baanknet.com/ ವೆಬ್‌ಸೈಟ್‌ಗೆ ಭೇಟಿ ನೀಡಿ ಇ–ಹರಾಜು ವೇದಿಕೆಯಲ್ಲಿ ನೋಂದಾಯಿಸಿಕೊಳ್ಳುವಂತೆ ಮತ್ತು ಪ್ಯಾನ್ ಕಾರ್ಡ್ ಮತ್ತು ಆಧಾರ್‌ನಂತಹ ಮಾನ್ಯ KYC ದಾಖಲೆಗಳನ್ನು ಇತ್ತೀಚಿನ ಮೊಬೈಲ್ ಸಂಖ್ಯೆಯೊಂದಿಗೆ ಲಿಂಕ್ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವಂತೆ ಮತ್ತು ಡಿಜಿ ಲಾಕರ್‌ನಲ್ಲಿ ಕಡ್ಡಾಯವಾಗಿ ನೋಂದಾಯಿಸಿಕೊಳ್ಳುವಂತೆ ಸೂಚಿಸಲಾಗಿದೆ. ಮೇಲಿನ ಇ–ಹರಾಜಿನಲ್ಲಿ Baanknet.com ಪೋರ್ಟಲ್ (ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈ ಲಿಮಿಟೆಡ್) ನಿಂದ ಬಿಡ್ಡಿಂಗ್‌ಗಾಗಿ, ನೀವು Baanknet ನ ಸಹಾಯವಾಣಿಯನ್ನು ಸಂಪರ್ಕಿಸಬಹುದು (ಸಂಪರ್ಕ ವಿವರಗಳು 7046612345/ 6354910172 / 8291220220 / 9892219848 / 8160205051, ಇಮೇಲ್: support.BAANKNET@psballiance.com

ಇ) ಉದ್ದೇಶಿತ ಬಿಡ್ದುದಾರರು ಚಲನ್‌ನಲ್ಲಿ ಉಲ್ಲೇಖಿಸಿರುವಂತೆ ಖಾತೆ ವಿವರಗಳಲ್ಲಿ RTGS/NEFT ಮೂಲಕ ಇಎಂಡಿಯನ್ನು ಠೇವಣಿ ಮಾಡಲು ಮೆ॥ ಪಿಎಸ್‌ಬಿ ಅಲೈಯನ್ಸ್ ಪ್ರೈವೇಟ್ ಲಿಮಿಟೆಡ್ (BAANKNET) ಪೋರ್ಟಲ್‌ನ ಇ–ವ್ಯಾಲೆಟ್‌ನಲ್ಲಿ ನೇರವಾಗಿ ಅಥವಾ ಅದರಲ್ಲಿ ಚಲನ್ ಅನ್ನು ರಚಿಸುವ ಮೂಲಕ ಮೀಸಲು ಬೆಲೆಯ 10% ಗಳ ಭದ್ರತಾ ಠೇವಣಿಯನ್ನು (ಇಎಂಡಿ) ದಿನಾಂಕ: 29/ 05/ 2026 ರಂದು ಅಥವಾ ಅದಕ್ಕೂ ಮೊದಲು ಸಂಜೆ 05:00 ಗಂಟೆಯೊಳಗೆ ಮಾಡತಕ್ಕದ್ದು

ಎಫ್) ಮೇಲೆ ತಿಳಿಸಿದಂತೆ ಹರಾಜು ಮೀಸಲು ಬೆಲೆಯಲ್ಲಿ ಪ್ರಾರಂಭವಾಗುತ್ತದೆ. ಬಿಡ್ಡರ್‌ಗಳು ತಮ್ಮ ಕೊಡುಗೆಗಳನ್ನು "ಇನ್‌ಕ್ರಿಮೆಂಟ್ ಕಾಂಬೊ" (ಕನಿಷ್ಠ 1 ಆಯ್ಕೆಮಾಡಿ) ಕಾಲಂ ಅಡಿಯಲ್ಲಿ ಉಲ್ಲೇಖಿಸಲಾದ ರೂ. 10,000/– (ಹೆಚ್ಚಿದ ಮೊತ್ತ/ಬೆಲೆ) ದ ಗುಣಕಗಳಲ್ಲಿ ಹೆಚ್ಚಿಸಬೇಕು. 'ಆನ್‌ಲೈನ್' ಹರಾಜಿನ ಮುಕ್ತಾಯದ ಸಮಯದಲ್ಲಿ ಅತಿ ಹೆಚ್ಚು ಬಿಡ್ (ಮೀಸಲು ಬೆಲೆಗಿಂತ ಹೆಚ್ಚಿನ) ಸಲ್ಲಿಸುವ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ. ನಿರ್ದಿಷ್ಟ ಆಸ್ತಿಯ ಮೇಲೆ ಇಎಂಡಿ ಸಲ್ಲಿಸಿದ ಒಬ್ಬ ಬಿಡ್ಡರ್ ಮಾತ್ರ ಇದ್ದರೂ ಸಹ, ಯಶಸ್ವಿ ಹೆಚ್–1 ಬಿಡ್ಡರ್ ಆಗಲು ಹೇಳಲಾದ ಬಿಡ್ಡರ್ ಮೀಸಲು ಬೆಲೆಗಿಂತ ಕನಿಷ್ಠ ಒಂದು ಹೆಚ್ಚಳವನ್ನು ಬಿಡ್ ಮಾಡಬೇಕು. ಇ–ಹರಾಜು ಪ್ರಕ್ರಿಯೆಯ ಮುಕ್ತಾಯದ ಸಮಯದಲ್ಲಿ ಅತ್ಯಧಿಕ ಬಿಡ್ ಸಲ್ಲಿಸುವ ಬಿಡ್ಡರ್‌ನನ್ನು ಯಶಸ್ವಿ ಬಿಡ್ಡರ್ ಎಂದು ಘೋಷಿಸಲಾಗುತ್ತದೆ ಮತ್ತು ಆ ಕುರಿತು ಸಂವಹನವನ್ನು ನೀಡಲಾಗುತ್ತದೆ, ಅದು ಸುರಕ್ಷಿತ ಸಾಲಗಾರರ ಅನುಮೋದನೆಗೆ ಒಳಪಟ್ಟಿರುತ್ತದೆ.

ಜಿ) ಪ್ರತಿ ವಿಸ್ತರಣೆಯ ಸಮಯದಲ್ಲಿ ಹೆಚ್ಚಿಸುವ ಮೊತ್ತ/ಬೆಲೆ ರೂ. 10,000/– (ಹೆಚ್ಚಿಸುವ ಬೆಲೆ) ಆಗಿರುತ್ತದೆ ಮತ್ತು ಕೊನೆಯ ನಿಮಿಷಗಳಲ್ಲಿ ಕ್ರಮಬದ್ಧ ಬಿಡ್ ಸ್ವೀಕರಿಸಿದ ನಂತರ ಸಮಯವನ್ನು 10 ನಿಮಿಷಗಳ ವರೆಗೆ ವಿಸ್ತರಿಸಲಾಗುತ್ತದೆ.

ಹೆಚ್) ಯಶಸ್ವಿ ಬಿಡ್‌ದಾರರ ಪರವಾಗಿ ಮಾರಾಟವನ್ನು ದೃಢೀಕರಿಸಲಾಗುತ್ತದೆ, ಆದರೆ ಅದು ಸುರಕ್ಷಿತ ಸಾಲಗಾರರ ದೃಢೀಕರಣಕ್ಕೆ ಒಳಪಟ್ಟಿರುತ್ತದೆ.

ಐ) ಯಶಸ್ವಿ ಬಿಡ್ದುದಾರರು ಮಾರಾಟ ಬೆಲೆಯ 25% (ಈಗಾಗಲೇ ಪಾವತಿಸಿದ ಇಎಂಡಿ ಸೇರಿದಂತೆ) ವನ್ನು ಅದೇ ದಿನ ತಕ್ಷಣವೇ ಮತ್ತು ಮುಂದಿನ ಕೆಲಸದ ದಿನದ ಮೊದಲು ಠೇವಣಿ ಇಡಬೇಕು ಮತ್ತು ಉಳಿದ 75% ಮೊತ್ತವನ್ನು ಸುರಕ್ಷಿತ ಸಾಲಗಾರರು ಮಾರಾಟವನ್ನು ದೃಢೀಕರಿಸಿದ ದಿನಾಂಕದಿಂದ 15 ದಿನಗಳ ಒಳಗೆ ಠೇವಣಿ ಇಡಬೇಕು. ಯಶಸ್ವಿ ಬಿಡ್ದುದಾರರು ಮೇಲೆ ತಿಳಿಸಿದ ಅವಧಿಯೊಳಗೆ ಮಾರಾಟ ಬೆಲೆಯನ್ನು ಪಾವತಿಸಲು ವಿಫಲವಾದರೆ, ಅವರು ಮಾಡಿದ ಠೇವಣಿಯನ್ನು ಅಧಿಕೃತ ಅಧಿಕಾರಿ ಯಾವುದೇ ಸೂಚನೆ ನೀಡದೇ ಮುಟ್ಟುಗೋಲು ಹಾಕಿಕೊಳ್ಳುತ್ತಾರೆ ಮತ್ತು ಆಸ್ತಿಯನ್ನು ತಕ್ಷಣವೇ ಮತ್ತೆ ಮಾರಾಟಕ್ಕೆ ಇಡಲಾಗುತ್ತದೆ.

ಜೆ) ಬಿಡ್ ಸ್ವೀಕರಿಸಿದ ನಂತರ ಬಿಡ್‌ದಾರರ ಹೆಸರುಗಳಲ್ಲಿ ಯಾವುದೇ ಸೇರ್ಪಡೆ/ಅಳಿಸುವಿಕೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ನೋಂದಣಿ ಸಮಯದಲ್ಲಿ ಸಲ್ಲಿಸಲಾದ ಬಿಡ್‌ದಾರರ ಹೆಸರನ್ನು ಮಾತ್ರ ಈ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ಕೆ) ಮೇಲೆ ತಿಳಿಸಿದ ಬಾಕಿ ಮಾರಾಟ ಬೆಲೆಯನ್ನು (ಇಎಂಡಿ ಮೊತ್ತವನ್ನು ಹೊರತುಪಡಿಸಿ) ಯಶಸ್ವಿ ಬಿಡ್ದುದಾರರು RTGS/NEFT ಮೂಲಕ ಕೆನರಾ ಬ್ಯಾಂಕ್, ಮಲ್ಲಾಡಿಹಳ್ಳಿ ಶಾಖೆಯ ಖಾತೆ ಸಂಖ್ಯೆ 209272434, IFSC Code CNRB00011002 ಗೆ ಪಾವತಿಸತಕ್ಕದ್ದು.

ಎಲ್) ಮಾರಾಟ ಪ್ರಮಾಣಪತ್ರದ ನೋಂದಣಿಗೆ ಅಗತ್ಯವಿರುವಂತೆ ಸಂಬಂಧಿತ ಅಧಿಕಾರಿಗಳಿಂದ NOC ಪಡೆಯುವುದು ಯಶಸ್ವಿ ಬಿಡ್ದುದಾರರು/ಖರೀದಿದಾರರ ಜವಾಬ್ದಾರಿಯಾಗಿದೆ, ಶುಲ್ಕ ಪಾವತಿಗೆ, ಅನ್ವಯವಾಗುವ ತೆರಿಗೆಗಳು ಸೇರಿದಂತೆ. ಅಗತ್ಯ ಅನುಮತಿಗಳು ಅಥವಾ ಅನುಮೋದನೆಗಳನ್ನು ಪಡೆಯುವ ಎಲ್ಲಾ ಶುಲ್ಕಗಳು, (ಸೊಸೈಟಿ ಶುಲ್ಕಗಳು, RWA, NOC ಶುಲ್ಕಗಳು, ವಿದ್ಯುತ್, ನೀರು, ನಿರ್ವಹಣಾ ಶುಲ್ಕಗಳು, ಪರವಾನಗಿ ಶುಲ್ಕ ಮತ್ತು ಯಶಸ್ವಿ ಬಿಡ್ಡರ್ ಪರವಾಗಿ ಹೇಳಲಾದ ಆಸ್ತಿಯನ್ನು ವರ್ಗಾಯಿಸಲು ಅಗತ್ಯವಿರುವ ಯಾವುದೇ ಇತರ ಶುಲ್ಕಗಳನ್ನು ಒಳಗೊಂಡಂತೆ ಆದರೆ ಇವುಗಳಿಗೆ ಸೀಮಿತವಾಗಿಲ್ಲ.

ಎಂ) ಕಾನೂನು, ಮುದ್ರಾಂಕ, ವರ್ಗಾವಣೆ, ನೋಂದಣಿ GST ಇತ್ಯಾದಿ ಅನ್ವಯವಾಗುವ ಶುಲ್ಕಗಳನ್ನು ಯಶಸ್ವಿ ಬಿಡ್ದುದಾರರೇ ಭರಿಸತಕ್ಕದ್ದು.

ಎನ್) ರೂ. 50.00 ಲಕ್ಷ (ಐವತ್ತು ಲಕ್ಷ ರೂಪಾಯಿ) ಕ್ಕಿಂತ ಹೆಚ್ಚಿನ ಮಾರಾಟದ ಆದಾಯಕ್ಕೆ, ಮಾರಾಟ ಮೊತ್ತದ 1% ದರದಲ್ಲಿ ಟಿಡಿಎಸ್ ಪಾವತಿಸಬೇಕಾಗುತ್ತದೆ, ಇದನ್ನು ಯಶಸ್ವಿ ಖರೀದಿದಾರರು ಪ್ರತ್ಯೇಕವಾಗಿ ಪಾವತಿಸಬೇಕು. GST ಅನ್ವಯವಾಗುವಲ್ಲೆಲ್ಲಾ, ಸರ್ಕಾರಿ ಮಾರ್ಗಸೂಚಿಗಳ ಪ್ರಕಾರ ಯಶಸ್ವಿ ಖರೀದಿದಾರರು ಅದನ್ನು ಪಾವತಿಸಬೇಕು.

ಒ) ಅಧಿಕೃತ ಅಧಿಕಾರಿಯ ಅತ್ಯುತ್ತಮ ಜ್ಞಾನ ಮತ್ತು ಮಾಹಿತಿಯ ಪ್ರಕಾರ, ಮೇಲಿನ ಕೋಷ್ಟಕ ಸಂಖ್ಯೆ 9 ಮತ್ತು 10 ರಲ್ಲಿ ಉಲ್ಲೇಖಿಸಲಾದ ಭದ್ರತಾ ಹಿತಾಸಕ್ತಿಯ ಮೇಲೆ ಪರಿಣಾಮ ಬೀರುವ ಆಸ್ತಿಯ ಮೇಲೆ ಯಾವುದೇ ಋಣ ಭಾರ ಅಥವಾ ದಾವೆ ಇಲ್ಲ. ಆದಾಗ್ಯೂ, ಉದ್ದೇಶಿತ ಬಿಡ್ಡರ್‌ಗಳು ತಮ್ಮ ಬಿಡ್ ಸಲ್ಲಿಸುವ ಮೊದಲು, ಮೇಲೆ ಪಟ್ಟಿ ಮಾಡಲಾದ ಹರಾಜಿನ ಮೇಲಿನ ಋಣ ಭಾರಗಳು ಮತ್ತು ದಾವೆ ಮತ್ತು ಸದರಿ ಆಸ್ತಿಯ ಮೇಲೆ ಪರಿಣಾಮ ಬೀರುವ ಕ್ಲೈಮ್‌ಗಳು/ಹಕ್ಕುಗಳು/ಬಾಕಿಗಳ ಬಗ್ಗೆ ತಮ್ಮದೇ ಆದ ಸ್ವತಂತ್ರ ವಿಚಾರಣೆಗಳು /ಶ್ರದ್ಧೆಯಿಂದಿರಬೇಕು. ಇ–ಹರಾಜು ಜಾಹೀರಾತು/ಮಾರಾಟ ಸೂಚನೆಯು ಬ್ಯಾಂಕಿನ ಯಾವುದೇ ಬದ್ಧತೆ ಅಥವಾ ಪ್ರಾತಿನಿಧ್ಯವನ್ನು ರೂಪಿಸುವುದಿಲ್ಲ ಎಂದು ಭಾವಿಸಲಾಗುವುದಿಲ್ಲ. ಅಧಿಕೃತ ಅಧಿಕಾರಿ/ಸೆಕ್ಯೂರ್ಡ್ ಕ್ರೆಡಿಟಾರ್‌ರವರು ಯಾವುದೇ ಮೂರನೇ ವ್ಯಕ್ತಿಯ ಕ್ಲೈಮ್‌ಗಳು/ಹಕ್ಕುಗಳು/ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ. ಮಾರಾಟಕ್ಕೆ ಇಡಲಾದ ಸುರಕ್ಷಿತ ಆಸ್ತಿಯ ಕುರಿತು ಆನ್‌ಲೈನ್ ಬಿಡ್ ಸಲ್ಲಿಸಿದ ನಂತರ ಯಾವುದೇ ರೀತಿಯ ಯಾವುದೇ ಕ್ಲೈಮ್ ಅನ್ನು ಪರಿಗಣಿಸಲಾಗುವುದಿಲ್ಲ.

ಪಿ) ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಸೂಕ್ತ ಶ್ರದ್ಧೆ ಮತ್ತು ಭೌತಿಕ ಪರಿಶೀಲನೆ ಮಾಡುವುದು ಮತ್ತು ಆಸ್ತಿ/ನಿರ್ದಿಷ್ಟತೆಯ ಬಗ್ಗೆ ತಮ್ಮನ್ನು ತಾವು ತೃಪ್ತಿಪಡಿಸಿಕೊಳ್ಳುವುದು ಬಿಡ್‌ದಾರರ ಜವಾಬ್ದಾರಿಯಾಗಿದೆ. ಬಿಡ್ ಸಲ್ಲಿಸಿದ ನಂತರದ ಯಾವುದೇ ಕ್ಲೈಮ್ ಅನ್ನು ಬ್ಯಾಂಕ್ ಪರಿಗಣಿಸುವುದಿಲ್ಲ. ಆಸಕ್ತ ಬಿಡ್ಡರ್‌ಗಳಿಗೆ ಹರಾಜಿನ ಆಸ್ತಿಯ ಪರಿಶೀಲನೆಯನ್ನು ದಿನಾಂಕ 29.05.2026 ರಂದು ಬೆಳಿಗ್ಗೆ 10:00 ರಿಂದ ಸಂಜೆ 5:00 ರವರೆಗೆ ಸೈಟ್‌ನಲ್ಲಿ ಅನುಮತಿಸಲಾಗುತ್ತದೆ.

ಕ್ಯೂ) ಪತ್ರಿಕೆಯಲ್ಲಿ ಪ್ರಕಟವಾದ ಇ–ಹರಾಜು ಪ್ರಕಟಣೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಅಧಿಕೃತ ಅಧಿಕಾರಿಗೆ ಸಾಧ್ಯವಾದಷ್ಟು ಉತ್ತಮವಾಗಿ ತಿಳಿಸಲಾಗಿದೆ.

ಆರ್) ಹರಾಜಿನ ಯಾವುದೇ ಹಂತದಲ್ಲಿ, ಅಧಿಕೃತ ಅಧಿಕಾರಿಯು ತನ್ನ ವಿವೇಚನೆಯಿಂದ, ಪೂರ್ವ ಸೂಚನೆ ಇಲ್ಲದೆ, ಮಾರಾಟದ ಹರಾಜು ಸೂಚನೆಯನ್ನು ರದ್ದುಗೊಳಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ ಮತ್ತು ಅಧಿಕೃತ ಅಧಿಕಾರಿಯು ಬಿಡ್/ಆಫರ್ ಅನ್ನು ಸ್ವೀಕರಿಸಬಹುದು/ತಿರಸ್ಕರಿಸಬಹುದು/ಮಾರ್ಪಡಿಸಬಹುದು/ರದ್ದು ಮಾಡಬಹುದು ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಹರಾಜನ್ನು ಮುಂದೂಡಬಹುದು.

ಎಸ್) ಹೆಚ್ಚಿನ ವಿವರಗಳಿಗಾಗಿ : ಕೆನರಾ ಬ್ಯಾಂಕ್, ಮಲ್ಲಾಡಿಹಳ್ಳಿ ಶಾಖೆ, (ಮೊಬೈಲ್ 9850985181) ಇಮೇಲ್ : cb11002@canarabank.com,, ಅವರನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು. ಸೇವಾ ಪೂರೈಕೆದಾರ ಬ್ಯಾಂಕ್ ನೆಟ್ (ಮೆ॥ ಪಿಎಸ್‌ಬಿ ಅಲಾಯನ್ಸ್ ಪ್ರೈ ಲಿಮಿಟೆಡ್), (ಸಂಪರ್ಕ ಸಂಖ್ಯೆ 7046612345 / 6354910172 / 8291220220 / 9892219848/ 8160205051, ಇಮೇಲ್: support.BAANKNET @psballiance.com / support.ebkray@procure247.com)

ವಿಶೇಷ ಸೂಚನೆ / ಎಚ್ಚರಿಕೆ :

ಕೊನೆಯ ನಿಮಿಷ / ಕ್ಷಣಗಳಲ್ಲಿ ಹರಾಜು ಪ್ರಕ್ರಿಯೆಗಳಿಂದ ಹರಾಜುದಾರರು ತಮ್ಮ ಸ್ವಇಚ್ಛೆಯಿಂದ ದೂರ ಸರಿಯಬಹುದು. ಇ –ಹರಾಜು ಪ್ರಕ್ರಿಯೆಯಲ್ಲಿ ಯಾವುದೇ ನಷ್ಟ / ವಿಫಲತೆ (ಇಂಟರ್‌ನೆಟ್ ವಿಫಲತೆ, ವಿದ್ಯುತ್ ವಿಫಲತೆ ಇತ್ಯಾದಿ) ಆದಲ್ಲಿ ಕೆನರಾ ಬ್ಯಾಂಕ್ ಅಥವಾ ಸರ್ವೀಸ್ ಪ್ರೋವೈಡರ್ ಅವರುಗಳು ಬಿಡ್‌ದಾರರಿಗೆ ಅಥವಾ ಮಾರಾಟದಾರರಿಗೆ ಹೊಣೆಗಾರರಾಗುವುದಿಲ್ಲ. ಇ–ಹರಾಜನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ಹರಾಜುದಾರರು ಅಗತ್ಯವಾದ ವ್ಯವಸ್ಥೆಗಳನ್ನು / ಪರ್ಯಾಯಗಳನ್ನು ಅಂದರೆ ವಿದ್ಯುತ್ ಪೂರೈಕೆ, ಬ್ಯಾಕ್‌ಅಪ್ ಇನ್ನಿತರೆ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಕೋರಲಾಗಿದೆ.

ದಿನಾಂಕ: 10–04–2026
ಸ್ಥಳ: ದಾವಣಗೆರೆ

ಸಹಿ/– ಅಧಿಕೃತ ಅಧಿಕಾರಿ
ಕೆನರಾ ಬ್ಯಾಂಕ್